**ಶುಭಾಶಯಗಳು**

ಭಾವೈಕ್ಯತೆಯ ಸಂಕೇತವಾದ
ಶ್ರೀ ಗಣೇಶ ಚತುರ್ಥಿಯ ಈ ಶುಭ ಸಂದರ್ಭದಲ್ಲಿ
ಸಮಸ್ತರಿಗೆ ಹಾರ್ದಿಕ ಶುಭಾಶಯಗಳು.

**- ಸಂಪಾದಕರು**

# ಜನತಾವಾಣಿ

**ಮಧ್ಯ ಕರ್ನಾಟಕದ ಆಪ್ತ ಒಡನಾಡಿ**

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

**ಬಿಡುವು**

ಶ್ರೀ ಗಣೇಶ ಚತುರ್ಥಿಯ ಪ್ರಯುಕ್ತ ಇಂದು
ನಮ್ಮ ಕಚೇರಿಗೆ ಬಿಡುವು. ಕಾರಣ, ನಾಳೆ ಗುರುವಾರದ
'ಜನತಾವಾಣಿ' ಸಂಚಿಕೆ ಪ್ರಕಟಗೊಳ್ಳುವುದಿಲ್ಲ.

**- ವ್ಯವಸ್ಥಾಪಕರು**

**ಸಂಪಾದಕರು :**
**ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ**

**ದಾವಣಗೆರೆ**
**ಬುಧವಾರ, ಆಗಸ್ಟ್ 31, 2022**

ಸಂಪುಟ : 49 ಸಂಚಿಕೆ : 109 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 8 ರೂ : 5.00 www.janathavani.com janathavani@mac.com









## ಗಣೇಶನ ಹಬ್ಬ : ಗುರು ವಾದ್ಯವೃಂದದಿಂದ ರಾಜ್ಯದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ



ದಾವಣಗೆರೆ, ಆ. 30- ನಗರದ ಚಿಂದೋಡಿ ಶಾಂತರಾಜ್ ಅಸೋಸಿಯೇಷನ್ನಿನ ಶ್ರೀ ಗುರು ವಾದ್ಯವೃಂದ (ಶ್ರೀ ಗುರು ಮ್ಯೂಜಿಕಲ್ ಪಾರ್ಟಿ) ದ ವತಿಯಿಂದ ಗಣಪತಿ ಹಬ್ಬದ ಪ್ರಯುಕ್ತ ನಾಳೆಯಿಂದ ಕರ್ನಾಟಕ ಮಾತ್ರವಲ್ಲದೇ, ಹೊರ ರಾಜ್ಯದಲ್ಲೂ 20 ದಿನ ಸಂಚರಿಸಿ, ಸಾಂಸ್ಕೃತಿಕ ಕಾರ್ಯಕ್ರಮ ನೀಡಲಾಗುತ್ತದೆ.

ಸಂಗೀತ ಕ್ಷೇತ್ರಕ್ಕೆ ಕಳೆದ 49 ವರ್ಷಗಳಿಂದ ನಿರಂತರ ಸೇವೆ ಸಲ್ಲಿಸುತ್ತಿರುವ ಈ ಸಂಸ್ಥೆ, 16 ಜನ ಕಲಾವಿದರುಗಳ ತಂಡದೊಂದಿಗೆ ಪ್ರಯಾಣ ಬೆಳೆಸಲಿದೆ ಎಂದು ಪ್ರವಾಸದ ನಿರ್ದೇಶನದ ಹೊಣೆ ಹೊತ್ತಿರುವ ರಾಜ್ಯ ಮತ್ತು ಅಂತರ ರಾಷ್ಟ್ರೀಯ ಕಲಾವಿದ, ನಾಟಕ ಅಕಾಡೆಮಿ ಪ್ರಶಸ್ತಿ ವಿಜೇತ ಚಿಂದೋಡಿ ಶಂಭುಲಿಂಗಪ್ಪ ತಿಳಿಸಿದ್ದಾರೆ.

ಸಹ ನಿರ್ದೇಶಕರಾಗಿ ಗೋಪಾಲರಾವ್ ಅವರು ಹಿನ್ನೆಲೆ ಗಾಯಕ - ಗಾಯಕಿಯರಾಗಿ ರಮೇಶ್ ಕುಲಕರ್ಣಿ, ಸಿದ್ದರಾಜ್, ಮಾರುತಿ, ಜೋಸೆಫ್, ಲಕ್ಷ್ಮಿ, ಸುನೀತ ಇವರೊಂದಿಗೆ ಶ್ರೇಷ್ಠ ಕಾರ್ಯಕ್ರಮಗಳನ್ನು ನೀಡಲಿದ್ದಾರೆ. ಚಿತ್ರಗೀತೆಗಳೊಂದಿಗೆ ಇತರೆ ಭಾಷೆಯ ಚಿತ್ರಗೀತೆಗಳು ಮತ್ತು ಮಿಮಿಕ್ರಿ, ನೃತ್ಯ ಪ್ರದರ್ಶನದೊಂದಿಗೆ ಕಾರ್ಯಕ್ರಮ ನೀಡಲಿದ್ದಾರೆ.

ಈ ಸಂಗೀತ ಸಂಜೆಯ ಕಾರ್ಯಕ್ರಮದ ಮಧ್ಯೆ ಚಿಂದೋಡಿ ಶಂಭುಲಿಂಗಪ್ಪ ಅವರ ಮಾಲೀಕತ್ವದಲ್ಲಿರುವ ಶ್ರೀ ಸಂಚಾರಿ ಕೆ.ಬಿ.ಆರ್. ಡ್ರಾಮಾ ಕಂಪನಿಯ ತಂಡದಿಂದ ಉತ್ತರ ಕರ್ನಾಟಕದ ಅನೇಕ ಸಕ್ಕರೆ ಕಾರ್ಖಾನೆಗಳಲ್ಲಿ ಮತ್ತು ಹುಬ್ಬಳ್ಳಿ, ಹಗರಿಬೊಮ್ಮನಹಳ್ಳಿ, ಸಿ.ಎನ್. ಹಳ್ಳಿ, ಸಂಕೇಶ್ವರ, ಸದಲಗ, ಸಂಗೊಳ್ಳಿ, ನಿಡಗುಂದಿ ಇನ್ನೂ ಅನೇಕ ನಗರಗಳಲ್ಲಿ 'ಮುದುಕನ ಮದುವೆ', 'ಕಿವುಡ ಮಾಡಿದ ಕಿತಾಪತಿ', 'ಸಾಧ್ವಿ ಸರಸ್ವತಿ' ಸೇರಿದಂತೆ ಅನೇಕ ನಾಟಕ ಪ್ರದರ್ಶನಗಳು ಇರುತ್ತವೆ.

## ಹರಿಹರ : ಆರೋಗ್ಯಮಾತೆ ಬಸಿಲಿಕದ ವಾರ್ಷಿಕ ಮಹೋತ್ಸಕ್ಕೆ ಚಾಲನೆ



ಹರಿಹರ, ಆ. 30 - ನಗರದ ಆರೋಗ್ಯಮಾತೆ ಬಸಿಲಿಕ ಪುಣ್ಯಕ್ಷೇತ್ರದ ವಾರ್ಷಿಕ ಮಹೋತ್ಸವವು ಅದ್ಧೂರಿಯಾಗಿ ಆರಂಭವಾಯಿತು. ಮಹೋತ್ಸವದ ಧ್ವಜಾರೋಹಣವನ್ನು ಶಿವಮೊಗ್ಗ ಧರ್ಮಾಧ್ಯಕ್ಷ ಡಾ.ಫ್ರಾನ್ಸಿಸ್ ಸೆರಾವೋ ಇವರು ನೆರವೇರಿಸಿದರು.

ಮುಖ್ಯ ಅತಿಥಿಗಳಾಗಿ ಶಾಸಕ ಎಸ್ ರಾಮಪ್ಪ ಹಾಗೂ ಮಾಜಿ ಶಾಸಕರಾದ ಬಿ.ಪಿ.ಹರೀಶ್, ಹೆಚ್.ಎಸ್. ಶಿವಶಂಕರ್ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಬಸಿಲಿಕದ ಪ್ರಧಾನ ಗುರುಗಳಾದ ಫಾದರ್ ಡಾ. ಅಂತೋಣಿ ಪೀಟರ್ ಮತ್ತಿತರರು ಉಪಸ್ಥಿತರಿದ್ದರು.

## ಜಗಳೂರು ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷರಾಗಿ ಎಂ.ವಿ.ರಾಜು ಆಯ್ಕೆ



ಜಗಳೂರು, ಆ.30- ತಾಲ್ಲೂಕಿನ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನ (ಪಿಕಾರ್ಡ್) ನೂತನ ಅಧ್ಯಕ್ಷರಾಗಿ ಮೆದಿಕೇರನಹಳ್ಳಿ ಗ್ರಾಮದ ಎಂ.ವಿ.ರಾಜು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಬ್ಯಾಂಕ್ ಸಭಾಂಗಣದಲ್ಲಿ ಇಂದು ನಡೆದ ಅಧ್ಯಕ್ಷರ ಚುನಾವಣೆಯಲ್ಲಿ ಎಂ.ವಿ.ರಾಜು ಅವರೊಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಹರೀಶ್‌ಕುಮಾರ್ ಘೋಷಣೆ ಮಾಡಿದರು.

ಈ ವೇಳೆ ಫಿಕಾರ್ಡ್ ಬ್ಯಾಂಕಿನ ಉಪಾಧ್ಯಕ್ಷ ಎಂ.ಎನ್. ಚನ್ನಬಸಪ್ಪ, ನಿರ್ದೇಶಕರುಗಳಾದ ಕೆ.ಬಿ. ಸಿದ್ದೇಶ್, ಜೆ.ಎಸ್.ಮಲ್ಲಿಕಾರ್ಜುನ್, ಚೌಡಮ್ಮ ಬಿ.ಡಿ. ಹನುಮಂತರೆಡ್ಡಿ, ಪಿ.ಎಸ್. ಮಂಜಣ್ಣ, ಎಂ.ಟಿ. ಧನಂಜಯರೆಡ್ಡಿ, ಜೆ. ಶ್ರೀನಿವಾಸ್, ಸೈಯದ್ ಕಲೀಂ, ಕೆ.ಜಿ. ಲೋಲಾಕ್ಷಮ್ಮ ಕಟ್ಟಿಗೆಹಳ್ಳಿ, ಕೆ.ಎಚ್. ಮಂಜಪ್ಪ, ವ್ಯವಸ್ಥಾಪಕ ಟಿ.ಎನ್.ಭೂಷಣ್ ಉಪಸ್ಥಿತರಿದ್ದರು.


**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**
ದಾವಣಗೆರೆ ವಿಭಾಗ, ದಾವಣಗೆರೆ

ಸಂ: ಕರಾಸಾ/ದಾವಿ/ಸಂಚಾರ/ವಾಣಿಜ್ಯ/1485/2022–23 ದಿನಾಂಕ: 27.08.2022

**'ಸಂಧಾನ ಪ್ರಕಟಣೆ ಸಂಖ್ಯೆ: 05/2022–23**

(ಬಸ್ ನಿಲ್ದಾಣಗಳ ಹೊರ ಆವರಣದ ಜಾಹೀರಾತುಗಳಿಗೆ ಪ್ಯಾಕೇಜ್ ಮಾದರಿಯಲ್ಲಿ)

ಕ.ರಾ.ರ.ಸಾ.ನಿಗಮದ ದಾವಣಗೆರೆ ವಿಭಾಗದ ವ್ಯಾಪ್ತಿಯಲ್ಲಿ ಇರುವ ಹರಿಹರ ಬಸ್ ನಿಲ್ದಾಣದ ಹೊರಭಾಗದಲ್ಲಿ ಜಾಹೀರಾತು ಅಳವಡಿಸಲು ಯೂನಿಪೋಲ್ಸ್, ಹೋರ್ಡಿಂಗ್ಸ್ ಮತ್ತು ಆರ್ಚ್‌ಗಳು ಖಾಲಿ ಇದ್ದು, ಸದರಿ ಬಸ್ ನಿಲ್ದಾಣದ ಹೊರ ಭಾಗದ ಜಾಹೀರಾತು ಸ್ಥಳಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು ಸಂಧಾನದ ಮೂಲಕ ಪ್ರಕಟಣೆ ಹೊರಡಿಸಲಾಗಿರುತ್ತದೆ.

ಸದರಿ ಮಾಹಿತಿಯನ್ನು ನಿಗಮದ ವೆಬ್‌ಸೈಟ್ **ksrtc.karnataka.gov.in** ನಲ್ಲಿ ದಿ: **29.08.2022** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ದಾವಣಗೆರೆ ವಿಭಾಗ – 577002 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ: **ವಿಭಾಗೀಯ ಸಂಚಾರ ಅಧಿಕಾರಿ – 7760990452, ಸಹಾಯಕ ಸಂಚಾರ ವ್ಯವಸ್ಥಾಪಕರು – 7760990461.**

ಸಹಿ/–, ವಿಭಾಗೀಯ ನಿಯಂತ್ರಣಾಧಿಕಾರಿ
ದಾವಣಗೆರೆ ವಿಭಾಗ

ವಾಸಾಸಂಇ/ವಾಪ್ರ/ಎಲ್‌ಸಿ/2007/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ


# ಶಾಲೆಗೆ ನುಗ್ಗಿದ ನೀರು ಆಜಾದ್ ಶಾಲೆಗೆ ಸೌಕರ್ಯ, ಶಾಶ್ವತ ಕಟ್ಟಡಕ್ಕಾಗಿ ಪ್ರತಿಭಟನೆ



ಹರಿಹರ, ಆ. 30- ನಗರದ ಜೆಸಿ ಬಡಾವಣೆ 3ನೇ ಮೇನ್‌ನಲ್ಲಿರುವ ಅಲ್ಪಸಂಖ್ಯಾತ ಮೌಲಾನಾ ಅಬ್ದುಲ್ ಕಲಾಂ ಆಜಾದ್ ಶಾಲೆಗೆ ಮೂಲಭೂತ ಸೌಕರ್ಯ ಮತ್ತು ಶಾಶ್ವತ ಕಟ್ಟಡದ ವ್ಯವಸ್ಥೆ ಕಲ್ಪಿಸುವಂತೆ ಒತ್ತಾಯಿಸಿ ಮುಸ್ಲಿಂ ಸಮಾಜದ ಮುಖಂಡರು ಶಾಲಾ ಮಕ್ಕಳೊಂದಿಗೆ ತಾಲ್ಲೂಕು ಕಚೇರಿ ಮುಂದೆ ಪ್ರತಿಭಟನೆ ಮಾಡಿದರು .

ಪ್ರತಿಭಟನೆ ಉದ್ದೇಶಿಸಿ ಮಾತನಾಡಿದ ಮುಸ್ಲಿಂ ಸಮಾಜದ ಮುಖಂಡರು, ಸುಮಾರು 40 ವರ್ಷಗಳ ಹಳೆಯ ಕಟ್ಟಡದಲ್ಲಿ ಶೌಚಾಲಯ ಇಲ್ಲ. ಶಾಲೆಗೆ ಮಳೆ ನೀರು ನುಗ್ಗಿ 2 ದಿನಗಳಾದರೂ ಸಂಬಂಧಪಟ್ಟ ಅಧಿಕಾರಿಗಳು ಬಂದು ನೋಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಶಾಲೆ ದುರಸ್ತಿ ಪಡಿಸುವಂತೆ ಮತ್ತು ಶೌಚಾಲಯ ಹಾಗೂ ಶಾಶ್ವತ ಕಟ್ಟಡ ಒದಗಿಸುವಂತೆ ಹಲವಾರು ಬಾರಿ ಅಲ್ಪಸಂಖ್ಯಾತರ ಇಲಾಖೆಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಕ್ರಮ ತೆಗೆದುಕೊಂಡಿಲ್ಲ. ಹೆಣ್ಣು ಮಕ್ಕಳು ಶೌಚಾಲಯಕ್ಕೆ ಎಲ್ಲಿ ಹೋಗಬೇಕು? ಎಂದು ಬೇಸರ ವ್ಯಕ್ತಪಡಿಸಿದರು .

ಜಿಲ್ಲಾ ಅಲ್ಪಸಂಖ್ಯಾತರ ಇಲಾಖೆಯ ಅಧಿಕಾರಿ ಮಲ್ಲಿಕಾರ್ಜುನ ಮಠದ ಮುಸ್ಲಿಂ ಸಮಾಜದ ಮುಖಂಡರ ಮನವಿಯನ್ನು ಸ್ವೀಕರಿಸಿ ಮಾತನಾಡಿ, ಶಾಲೆಯನ್ನು ಖಾಸಗಿ ಕಟ್ಟಡಕ್ಕೆ ಸ್ಥಳಾಂತರಿಸಲು ಕೇಂದ್ರ ಕಚೇರಿಗೆ ಮನವಿ ಸಲ್ಲಿಸಿದ್ದೇವೆ. ಮನವಿ ಅಂಗೀಕಾರವಾದ ಕೂಡಲೇ ಬಾಡಿಗೆ ಕಟ್ಟಡಕ್ಕೆ ಶಾಲೆಯನ್ನು ಸ್ಥಳಾಂತರಿಸುತ್ತೇವೆ ಎಂದು ಹೇಳಿದರು .

**ಹರಿಹರ**

ನಗರದ ಎ.ಪಿ.ಎಂ.ಸಿ ಯಾರ್ಡ್‌ನಲ್ಲಿ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿರುವ ಜಾಗ ಗುರುತಿಸಲಾಗಿದೆ. ಇದನ್ನು ಶಿಕ್ಷಣ ಇಲಾಖೆಯಿಂದ ಅಲ್ಪಸಂಖ್ಯಾತ ಇಲಾಖೆಗೆ ವರ್ಗಾಯಿಸುವಂತೆ ಶಾಸಕ ಎಸ್. ರಾಮಪ್ಪ ಹಾಗೂ ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದಿದ್ದೇವೆ ಎಂದವರು ಹೇಳಿದರು.

ತಹಶೀಲ್ದಾರ್ ಎಂ.ಬಿ. ಅಶ್ವತ್ಥ್ ಅವರು ಪ್ರತಿಭಟನೆ ಗಮನಿಸಿ, ಅಲ್ಪಸಂಖ್ಯಾತರ ಇಲಾಖೆಯ ಅಧಿಕಾರಿಯನ್ನು ಸ್ಥಳಕ್ಕೆ ಕರೆಸಿ ಮಾತನಾಡಿದರು. ಸದ್ಯಕ್ಕೆ ಶಾಲೆಯನ್ನು ಬೇರೆ ಕಡೆ ಸ್ಥಳಾಂತ ರಿಸಲು ಪ್ರಯತ್ನಿಸುವಂತೆ ಸೂಚಿಸಿದರು. ಶಾಲೆಗೆ ನುಗ್ಗಿದ ನೀರನ್ನು ಸ್ವಚ್ಛಗೊಳಿಸಲು ನಗರಸಭೆಯವರಿಗೆ ಸೂಚಿಸಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯರಾದ ದಾದಾ ಖಲಂದರ್, ಮುಜಾಮಿಲ್, ಮುಖಂಡರಾದ ಆಸೀಫ್ ಜುನೇದಿ, ಜಫುಲ್ಲಾ, ಜಹೀರ್, ಗೌಸ್ ಪೀರ್, ಜಮೀರ್, ಅಫ್ರೋಜ್, ಜಬೀವುಲ್ಲಾ, ಶಾಲೆಯ ಮುಖ್ಯೋಪಾಧ್ಯಾಯರಾದ ಸೋಮಶೇಖರ್ ಮತ್ತಿತರರು ಉಪಸ್ಥಿತರಿದ್ದರು.

## ರಾಜನಹಳ್ಳಿ ಪಿಎಸಿಎಸ್ ಅಧ್ಯಕ್ಷರಾಗಿ ಬಣಕಾರ ಬೀರಪ್ಪ



ಮಲೇಬೆನ್ನೂರು, ಆ.30- ರಾಜನಹಳ್ಳಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಜಿ.ಪಂ. ಮಾಜಿ ಸದಸ್ಯ ಹಾಗೂ ವಕೀಲ ಎಂ. ನಾಗೇಂದ್ರಪ್ಪ ಹಾಗೂ ಗ್ರಾಮದ ಎಲ್ಲಾ ಮುಖಂಡರ ನೇತೃತ್ವದಲ್ಲಿ ಎಲ್ಲಾ ಸ್ಥಾನಗಳಿಗೆ ಅವಿರೋಧವಾಗಿ ಆಯ್ಕೆ ನಡೆದಿದೆ.

ಸಂಘದ ನೂತನ ನಿರ್ದೇಶಕರಾಗಿ ರಾಜನಹಳ್ಳಿಯ ಬಣಕಾರ ಬೀರಪ್ಪ ಟಿ. ಧನಂಜಯಪ್ಪ, ಗುಡದಯ್ಯ, ಜಿ. ಪ್ರಕಾಶ್, ಶ್ರೀಮತಿ ಸರಸ್ವತಿ, ಶ್ರೀಮತಿ ಹೇಮಲತಾ, ಶ್ರೀಮತಿ ಲಕ್ಷ್ಮಮ್ಮ ಪಿ. ತಿಪ್ಪೇಸ್ವಾಮಿ, ಸಿ.ಎಸ್. ಅಜ್ಜಪ್ಪ, ಅನ್ವರ್ ಭಾಷಾ, ಹಲಸಬಾಳು ಗ್ರಾಮದ ವಿಜಯಕುಮಾರ್ ಮತ್ತು ನಾಗೇನಹಳ್ಳಿಯ ಕೃಷ್ಣಪ್ಪ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನಂತರ ನಡೆದ ಅಧ್ಯಕ್ಷ-ಉಪಾಧ್ಯಕ್ಷರ ಚುನಾವಣೆಯಲ್ಲೂ ನೂತನ ಅಧ್ಯಕ್ಷರಾಗಿ ರಾಜನಹಳ್ಳಿಯ ಬಣಕಾರ ಬೀರಪ್ಪ ಮತ್ತು ಉಪಾಧ್ಯಕ್ಷರಾಗಿ ಹಲಸಬಾಳು ವಿಜಯಕುಮಾರ್ ಅವರು ಅವಿರೋಧವಾಗಿ ಆಯ್ಕೆಯಾದರು.

ಗ್ರಾಮದ ಜಯಪ್ಪಗೌಡ್ರು, ವೈ. ಚಂದ್ರಶೇಖರ್, ವೀರಬಸಯ್ಯ ಎ.ಕೆ. ನಾಗೇಂದ್ರಪ್ಪ, ಯಲ್ಲಪ್ಪ ಪೂಜಾರ್ ಹನುಮಂತಪ್ಪ, ಗಿರೀಶ್ ಅಂಗಡಿ, ಹಲಸಬಾಳು ಸುರೇಶ್, ಶಿವಪ್ಪ, ಮಾರುತಿ ಮತ್ತಿತರರು ಈ ವೇಳೆ ಹಾಜರಿದ್ದರು.

ಚುನಾವಣಾಧಿಕಾರಿಯಾಗಿ ಸಹಕಾರ ಇಲಾಖೆಯ ಭಾಗ್ಯಶ್ರೀ ಪಾಟೀಲ್ ಕಾರ್ಯನಿರ್ವಹಿಸಿದರು. ಸಂಘದ ಸಿಇಓ ಎಂ.ಎನ್. ಶಿಲ್ಪ ಸಹಕರಿಸಿದರು.

# ಭಾರೀ ಮಳೆ : ಸಂಕ್ಲೀಪುರ, ಗುಳದಹಳ್ಳಿಯಲ್ಲಿ ನೂರಾರು ಎಕರೆ ನಾಟಿ ಜಲಾವೃತ, ಹರೀಶ್ ಭೇಟಿ



ಮಲೇಬೆನ್ನೂರು, ಆ.30- ನಿನ್ನೆ ರಾತ್ರಿ ಸುರಿದ ಭಾರೀ ಮಳೆಯಿಂದಾಗಿ ಹಳ್ಳ-ಕೊಳ್ಳಗಳು ತುಂಬಿ ಹರಿದ ಪರಿಣಾಮ ಹರಿಹರ ತಾಲ್ಲೂಕಿನ ಸಂಕ್ಲೀಪುರ, ಗುಳದಹಳ್ಳಿ, ದೇವರಬೆಳಕೆರೆ ಮತ್ತು ದಾವಣಗೆರೆ ತಾಲ್ಲೂಕಿನ ಬಲ್ಲೂರು, ಮುದಹದಡಿ, ವಡೆಯರಹಳ್ಳಿ, ಜಡಗನಹಳ್ಳಿ ಹಾಗೂ ಹೊನ್ನಾಳಿ ತಾಲ್ಲೂಕಿನ ಮುಕ್ತೇನಹಳ್ಳಿ ಗ್ರಾಮಗಳ ನೂರಾರು ಎಕರೆ ಭತ್ತದ ನಾಟಿ ಗದ್ದೆಗಳು ಜಲಾವೃತವಾಗಿವೆ. ಸೂಳೆಕೆರೆ ತುಂಬಿ ಹರಿಯುತ್ತಿದ್ದು, ಆ ನೀರು ಹರಿದು ಬರುವ ಹಳ್ಳಕ್ಕೆ ಎಲ್ಲಾ ಸಣ್ಣ - ಸಣ್ಣ ಹಳ್ಳಗಳು ಸೇರಿ ಬರುವ ನೀರು ದೇವರಬೆಳಕೆರೆ ಪಿಕಪ್ ಡ್ಯಾಮ್ ಸೇರುತ್ತಿದೆ.

ಈ ಹಳ್ಳ ಹರಿಯುವ ಮಾರ್ಗದ ಅಕ್ಕ-ಪಕ್ಕದಲ್ಲಿರುವ ಭತ್ತದ ಗದ್ದೆ, ತೋಟಗಳೂ ಜಲಾವೃತಗೊಂಡಿವೆ. ದೇವರಬೆಳಕೆರೆ ಪಿಕಪ್ ಡ್ಯಾಮ್‌ನಿಂದ ಹೆಚ್ಚುವರಿ ನೀರು ಸರಾಗವಾಗಿ ಹೊರ ಹೋಗದ ಕಾರಣ ಹಿನ್ನೀರಿನಿಂದ ಹತ್ತಾರು ಹಳ್ಳಿಗಳ ರೈತರಿಗೆ ಬಹಳ ತೊಂದರೆ ಆಗುತ್ತಿದೆ ಎಂದು ಗುಳದಹಳ್ಳಿ, ಸಂಕ್ಲೀಪುರಕ್ಕೆ ಭೇಟಿ ವೀಕ್ಷಿಸಿದ ಮಾಜಿ ಶಾಸಕ ಬಿ.ಪಿ. ಹರೀಶ್ ಪತ್ರಕರ್ತರಿಗೆ ತಿಳಿಸಿದರು.

ಜಿಲ್ಲಾಡಳಿತ ಕೂಡಲೇ ಈ ಭಾಗದ ರೈತರ ನೆರವಿಗೆ ಧಾವಿಸಬೇಕು. ತಕ್ಷಣ ದೇವರಬೆಳಕೆರೆ ಡ್ಯಾಮ್‌ಗೆ ಮಾನವ ಚಾಲಿತ ಗೇಟ್ ಅಳವಡಿಸಲು ಕ್ರಮ ಕೈಗೊಳ್ಳಬೇಕೆಂದು ಹರೀಶ್ ಆಗ್ರಹಿಸಿದ್ದಾರೆ.

ತಾ.ಪಂ. ಮಾಜಿ ಸದಸ್ಯ ಗುಳದಹಳ್ಳಿ ಮಾಲತೇಶ್, ಮುಖಂಡರಾದ ಜಿ.ಎಂ. ಶೇಖರಪ್ಪ, ಬಿ. ನಾಗರಾಜಪ್ಪ, ಜಿ.ಎನ್. ನಾಗರಾಜಪ್ಪ, ಜಿ.ಎನ್. ನಿಂಗಪ್ಪ, ಜಿ.ಟಿ. ಕರಿಬಸಪ್ಪ, ವೀರಭದ್ರಯ್ಯ, ನಿಂಗಪ್ಪ, ತಿಪ್ಪಣ್ಣ, ಕೊಟ್ರಯ್ಯ, ಸಿ.ಎನ್. ಉಮ್ಮಣ್ಣ ಮತ್ತು ಗ್ರಾಮ ಲೆಕ್ಕಾಧಿಕಾರಿ ಅಣ್ಣಪ್ಪ, ಕೃಷಿ ಇಲಾಖೆಯ ಇನಾಯಿತ್, ರಾಕೇಶ್ ಈ ವೇಳೆ ಹಾಜರಿದ್ದರು.

**ರಸ್ತೆ ಸಂಪರ್ಕ ಬಂದ್** : ಸೂಳೆಕೆರೆ ಹಳ್ಳದ ನೀರಿನಿಂದಾಗಿ ಸಂಕ್ಲೀಪುರ-ಮುಕ್ತೇನಹಳ್ಳಿ ನಡುವಿನ ರಸ್ತೆ ಸಂಪರ್ಕ ಬಂದ್ ಆಗಿದೆ.

## ವಿಶ್ವ ಪತ್ರಿಕಾ ದಿನಾಚರಣೆಗೆ ಆಹ್ವಾನ

ದಾವಣಗೆರೆ, ಆ. 30- ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ವತಿಯಿಂದ ಸೆಪ್ಟೆಂಬರ್ 1 ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ವಿಶ್ವ ಪತ್ರಿಕಾ ವಿತರಕರ ದಿನಾಚರಣೆ ಕಾರ್ಯಕ್ರಮ ನಡೆಯಲಿದೆ.

ಕಾರ್ಯಕ್ರಮಕ್ಕೆ ನಗರದಿಂದ 50 ಜನ ಪತ್ರಿಕಾ ವಿತರಕರ ತಂಡ ಬೆಂಗಳೂರಿಗೆ ತೆರಳುತ್ತಿದ್ದು, ಕಾರ್ಯಕ್ರಮಕ್ಕೆ ಪತ್ರಿಕಾ ವಿತರಕರು ಪಾಲ್ಗೊಳ್ಳುವಂತೆ ಒಕ್ಕೂಟದ ಜಿಲ್ಲಾಧ್ಯಕ್ಷ ಚಂದ್ರಣ್ಣ ಕೋರಿದ್ದಾರೆ.

## ನಗರದಲ್ಲಿ ನಾಳೆ ಸರ್ವ ಸಮಾಜದ ಸಭೆ

ದಾವಣಗೆರೆ, ಆ. 30- ಶ್ರೀ ಶಿವಮೂರ್ತಿ ಮುರುಘಾ ಶರಣರಿಗೆ ನೈತಿಕ ಬೆಂಬಲ ವ್ಯಕ್ತಪಡಿಸುವ ಸಲುವಾಗಿ ಅಭಿಪ್ರಾಯಗಳನ್ನು ಸೂಚಿಸಲು ಮತ್ತು ಸೂಕ್ತ ಕಾರ್ಯಕ್ರಮ ರೂಪಿಸಲು ನಾಡಿದ್ದು ದಿನಾಂಕ 1 ರ ಗುರುವಾರ ಸಂಜೆ 4 ಗಂಟೆಗೆ ನಗರದ ಮೋತಿ ಚನ್ನಬಸಮ್ಮ ಕಲ್ಯಾಣ ಮಂಟಪದಲ್ಲಿ ಸರ್ವ ಸಮಾಜದ ಸಭೆ ಕರೆಯಲಾಗಿದೆ ಎಂದು ಮುರುಘಾ ಮಠದ ಅಭಿಮಾನಿಗಳು ತಿಳಿಸಿದ್ದಾರೆ.

ಮಂಗಳವಾರ ನಗರದ ಶಿವಯೋಗಾಶ್ರಮದಲ್ಲಿ ಶಿವಯೋಗಾಶ್ರಮ ಟ್ರಸ್ಟ್, ವೀರಶೈವ ವಿದ್ಯಾವರ್ಧಕ ಫಂಡ್ ಸಂಘ ಹಾಗೂ ಧರ್ಮದರ್ಶಿಗಳ ಸಮಿತಿ ವಿರಕ್ತಮಠ ಇವರ ಸಂಯುಕ್ತಾಶ್ರಯದಲ್ಲಿ ಕರೆಯಲಾಗಿದ್ದ ಪೂರ್ವಭಾವಿ ಸಭೆಯಲ್ಲಿ ಸರ್ವ ಸಮಾಜ ಸಭೆ ಕರೆಯಲು ತೀರ್ಮಾನ ಕೈಗೊಳ್ಳಲಾಗಿದೆ.

## ದ್ವಿತೀಯ ವರ್ಷದ ಪುಣ್ಯ ಸ್ಮರಣೆ




**ಶ್ರೀಮತಿ ಕೆ.ಎಂ. ಉಮಾದೇವಿಯವರು, ದಾವಣಗೆರೆ.**

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು.
ನಿಮ್ಮ ನೆನಪು ನಮಗೆ ಸದಾ ಹಚ್ಚಹಸಿರು, ಸ್ಫೂರ್ತಿದಾಯಕ, ನಿಮ್ಮ ಪ್ರೀತಿ, ಆರೈಕೆ, ನೆನಪುಗಳು ದಾರಿದೀಪ, ಸದಾ ನಿಮ್ಮ ನೆನಪಿನಲ್ಲಿರುವ...

ಪತಿ : **ಕೆ.ಎಂ. ವೀರಭದ್ರಯ್ಯನವರು**
(ನಿವೃತ್ತ ವ್ಯವಸ್ಥಾಪಕರು, DUCB ಬ್ಯಾಂಕ್, ದಾವಣಗೆರೆ.)
ಹಿರಿಯ ಮಗ : **ಕೆ.ಎಂ. ದಂಡಪಾಣಿ,** ಸೊಸೆ : **ಹೆಚ್.ಬಿ. ಪ್ರಿಯಾಂಕ**
ಕಿರಿಯ ಮಗ : **ಕೆ.ಎಂ.ವಿ. ವಿಜಯರಾಜ್,** ಸೊಸೆ : **ಸ್ಫೂರ್ತಿ ಎಸ್.**
**ಕುರುವಹೊಸಳ್ಳಿ ಮಠದ ವಂಶಸ್ಥರು ಮತ್ತು ಬಂಧು-ಮಿತ್ರರು**

## ದ್ವಿತೀಯ ವರ್ಷದ ಪುಣ್ಯಸ್ಮರಣೆ



ಜನನ : 21-9-1961
ನಿಧನ : 31-8-2020

**ದಿ|| ಶ್ರೀ ವಿಜಯ್‌ಕುಮಾರ್ ಬೆಳಗಾವಿ**

*ಮುಗಿಲಗಲ ನಗುವಿನ ಮಳೆಸುರಿಸಿ*
*ಜಗದಗಲ ಪ್ರೀತಿ ಅಮೃತಧಾರೆ ಹರಿಸಿ*
*ನೆನಪಿನಂಗಳದಲಿ ನಿಮ್ಮ ಚಿರಕಾಲ ಸ್ಮರಿಸಿ*
*ನಿಮ್ಮ ದಾರಿಯಲ್ಲೇ ಸಾಗುವೆವು ಸದಾ ಅನುಸರಿಸಿ...*

ಸದಾ ನಿಮ್ಮ ಸ್ಮರಣೆಯಲ್ಲಿರುವ...

**ನಿಮ್ಮ ಕುಟುಂಬದವರು, ಬೆಳಗಾವಿ ವಂಶಸ್ಥರು, ಬಂಧು-ಮಿತ್ರರು, ದಾವಣಗೆರೆ.**

### ಶ್ರೀಮತಿ ಲಲಿತಮ್ಮ ಬಸವರಾಜಪ್ಪ ವಾಲಿಶೆಟ್ರು ನಿಧನ



ದಾವಣಗೆರೆ ವಾಸಿ ದಿ.ವಾಲಿ ಶೆಟ್ರು ಬಸವರಾಜಪ್ಪನವರ ಧರ್ಮಪತ್ನಿ ಶ್ರೀಮತಿ ಲಲಿತಮ್ಮ ಅವರು ದಿನಾಂಕ 30.8.2022ರ ಮಂಗಳವಾರ ಬೆಳಿಗ್ಗೆ 11.45ಕ್ಕೆ ನಿಧನರಾದರು. ಓರ್ವ ಪುತ್ರ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 31.8.2022ರ ಬುಧವಾರ ಬೆಳಿಗ್ಗೆ 10 ಗಂಟೆಗೆ ಹಳೇ ದಾವಣಗೆರೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

### ರಘುನಾಥರಾವ್ ಮೋಹಿತೆ ನಿಧನ



ದಾವಣಗೆರೆ ಸಿದ್ದವೀರಪ್ಪ ಬಡಾವಣೆ 3ನೇ ಕ್ರಾಸ್ #1648/15/16 ಬಾಲಾಜಿ ನಿವಾಸ ವಾಸಿ ದಿ|| ರಘುನಾಥರಾವ್ ಮೋಹಿತೆ (81) ಅವರು ದಿನಾಂಕ: 30.8.2022 ರಂದು ಮಂಗಳವಾರ ಸಂಜೆ 8 ಗಂಟೆಗೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ: 31.8.2022ರ ಬುಧವಾರ ಬೆಳಿಗ್ಗೆ 10 ಗಂಟೆಗೆ ಪಿ.ಬಿ ರಸ್ತೆಯ ವೈಕುಂಠ ಧಾಮದಲ್ಲಿ ನೆರವೇರಲಿದೆ.

## ಗಣೇಶ ಚತುರ್ಥಿ

ಬಂದಿತು ಹಬ್ಬ - ಗಣೇಶ ಚತುರ್ಥಿ
ಹಾದಿ-ಬೀದಿಗಳಲ್ಲಿ ಮಣ್ಣಿನ ಗಣಪನ ಮೂರ್ತಿ
ದೇಶ-ವಿದೇಶಗಳಲ್ಲೆಲ್ಲ ಹರಡಿದೆ ಮುದ್ದು ಗಣಪನ ಕೀರ್ತಿ
ಪುಟಾಣಿಗಳಿಗೆ 'ಬಪ್ಪ' ನೆಂದರೆ ಅಪಾರ ಪ್ರೀತಿ

ಸಿಂಗಾರಗೊಳ್ಳುವವು ಮನೆಯಂಗಳದಲ್ಲಿ ನ ರಂಗೋಲಿ,
ಮನೆಯ ಹೆಬ್ಬಾಗಿಲಿಗೆ ತಳಿರು ತೋರಣಗಳ ಜೋಕಾಲಿ,
ಮನೆ- ಮನಗಳ ಹೊಸ್ತಿಲ ದಾಟಿ ಮಾಡು ನೀ ಪ್ರವೇಶ
ಹಲವು ನಾಮಗಳಿಗನುಸಾರವಾಗಿ ನಿನ್ನದು ಬಗೆ ಬಗೆಯ ವೇಷ

ಮೋದಕ ಪ್ರಿಯ - ನೀನು ಗಣಪ,
ದೊಡ್ಡ ದೊಡ್ಡ ವಾಹನಗಳಲ್ಲಿ ಕೊಂಡೊಯ್ಯುವವರು ನಿನ್ನ 'ಬಪ್ಪಾ',
ಗೀತೆ- ಗಾಯನ- ಡೊಳ್ಳು ಗಳೊಂದಿಗೆ ನಿನ್ನ ಸಂಚಾರ
ನಿನ್ನ ಸುತ್ತಲು ಕುಣಿವ ಭಕ್ತ ಜನಗಳ ಹಿಂಡು ಅಪಾರ

ಮಡಿ- ಉಪವಾಸಗಳಿಂದ ಮಾಡಿದ ಸಿಹಿ ತಿಂಡಿಗಳು
ಭಕ್ತಿ ಭಾವಗಳಿಂದ ನಿನ್ನಯ ಪೂಜೆಯ ಮಾಡುವೆವು
'ಸರ್ವೇ ಜನಾಃ ಸುಖಿನೋ ಭವಂತು' - ಆಸ್ತಿಕರ ಬೇಡಿಕೆ
ಈಡೇರಿಸುವ ಬಾ ತಂದೆ - ಮನ ಗಳಲ್ಲಿನ ಕೋರಿಕೆ

ಭಕ್ತಿ ಭಾವಗಳಿಂದ ಕಂಡಕಂಡಲ್ಲೆಲ್ಲ ನಿನ್ನದೇ ಆರಾಧನೆ
ಕರಿದ ತಿಂಡಿ ಫಲ-ತಾಂಬೂಲಗಳ ನಿವೇದನೆ
ದಿನ ಗಳಿಗನುಸಾರವಾಗಿ ನೀರಿನಲ್ಲಿ ನಿನ್ನ ವಿಸರ್ಜನೆ
'ಮತ್ತೆ ಬೇಗ ಬಾ ಗಣಪ' ಎಂಬದು ಭಕ್ತಾದಿಗಳ ಪ್ರಾರ್ಥನೆ

- **ಡಾ|| ದೀಪಶ್ರೀ ಪ್ರಮೋದ್ ಗುಜ್ಜರ್,** ಉಪನ್ಯಾಸಕರು,
ಬಾಪೂಜಿ ದಂತ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ,
ದಾವಣಗೆರೆ

## ಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನದಲ್ಲಿ ಇಂದಿನಿಂದ ವಿನಾಯಕ ಮಹೋತ್ಸವ



ದಾವಣಗೆರೆಯ ವಾಸವಿ ಯುವಜನ ಸಂಘದಿಂದ 41ನೇ ವಿನಾಯಕ ಮಹೋತ್ಸವದ ಅಂಗವಾಗಿ ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ಅಮ್ಮನವರ ಆತ್ಮಚರಿತ್ರೆ, ಅಗ್ನಿಪ್ರವೇಶ ಹಾಗೂ ವಿಶ್ವರೂಪ ದರ್ಶನ ಒಳಗೊಂಡ ಶ್ರೀ ವಾಸವಿ ವೈಭವ ಪ್ರದರ್ಶನವನ್ನು 3ಡಿ ಪ್ರೊಜೆಕ್ಷನ್ ವೀಡಿಯೋ ಮ್ಯಾಪಿಂಗ್ ಹಾಗೂ ಲೇಜರ್ ಮೂಲಕ ಪ್ರದರ್ಶಿಸಲಾಗುವುದು.

ಇಂದು ಮಧ್ಯಾಹ್ನ 12.15ಕ್ಕೆ ಶ್ರೀ ವಿಘ್ನೇಶ್ವರ ಪ್ರತಿಷ್ಠಾಪನೆಯಿದ್ದು, ನಾಳೆ ಗುರುವಾರದಿಂದ ಸೆಪ್ಟೆಂಬರ್ 7ರವರೆಗೆ ಪ್ರತಿದಿನ ಸಂಜೆ 5.30ರಿಂದ 9ರವರೆಗೆ ಪ್ರದರ್ಶನ ನಡೆಯಲಿದೆ. ಸೆಪ್ಟೆಂಬರ್ 8ರ ಗುರುವಾರ ಮಧ್ಯಾಹ್ನ 3.30ಕ್ಕೆ ವಿಘ್ನೇಶ್ವರ ಸ್ವಾಮಿಯನ್ನು ವಿಸರ್ಜಿಸಲಾಗುವುದು ಎಂದು ಸಂಘದ ಅಧ್ಯಕ್ಷ ಅಮರಾವತಿ ಡಿ.ರಾಘವೇಂದ್ರ ತಿಳಿಸಿದ್ದಾರೆ.

ಆರ್ಯ-ವೈಶ್ಯ ಕುಲದೇವತೆ ಶ್ರೀ ಕನ್ಯಕಾಪರಮೇಶ್ವರಿ ಅಮ್ಮನವರ ಅಗ್ನಿಪ್ರವೇಶದ ಸಹಸ್ರಮಾನ ವರ್ಷ ತುಂಬಿದ ಪ್ರಯುಕ್ತ ನಾಳೆ ಗುರುವಾರ ವಿಷ್ಣು ಸಹಸ್ರನಾಮ ಹೋಮ, ಸೆ.2ರಂದು ಗಣಪತಿ ಹೋಮ, ಸೆ. 3ರಂದು ಏಕಾದಶ ರುದ್ರಾಭಿಷೇಕ, ಮಹಾಮೃತ್ಯುಂಜಯ ಹೋಮ, ಸೆ. 4ರಂದು ಗಾಯತ್ರಿ ಹೋಮ, ಸೆ.5ರಂದು ಬಿಲ್ವಾರ್ಚನೆ ಮತ್ತು ರುದ್ರಹೋಮ, ಸೆ. 6ರಂದು ಮನ್ಯುಸೂಕ್ತ ಹೋಮ, ಸೆ. 7ರಂದು ವಾಸವಿ ಹೋಮ, ಸೆ. 8ರಂದು ಪುರುಷಸೂಕ್ತ ಹೋಮಗಳನ್ನು ಹಮ್ಮಿಕೊಳ್ಳಲಾಗಿದೆ.

## ನಗರದ ಶಿವಕುಮಾರ ಸ್ವಾಮಿ ಬಡಾವಣೆಯಲ್ಲಿ ಇಂದು ಹಾಸ್ಯ ಸಂಜೆ

ದಾವಣಗೆರೆ ಶಿವಕುಮಾರ ಸ್ವಾಮಿ ಬಡಾವಣೆಯ ನಾಗರಿಕ ಹಿತರಕ್ಷಣಾ ಸಮಿತಿ ವತಿಯಿಂದ 16ನೇ ವರ್ಷದ ಶ್ರೀ ಗಣೇಶೋತ್ಸವ ಕಾರ್ಯಕ್ರಮವನ್ನು ಸಂಜೀವಿನಿ ಆಂಜನೇಯ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಇಂದು ಬೆಳಿಗ್ಗೆ 11ಕ್ಕೆ ಗಣಪತಿ ಪ್ರತಿಷ್ಠಾಪನೆ, ಸಂಜೆ 6ಕ್ಕೆ ಸಭಾ ಕಾರ್ಯಕ್ರಮ ಮತ್ತು ರಿಚರ್ಡ್ ಲೂಯಿಸ್ ತಂಡದವರಿಂದ ಹಾಸ್ಯ ಸಂಜೆ ನಡೆಯಲಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಮಿತಿಯ ಅಧ್ಯಕ್ಷ ಜಿ.ಪಿ. ಮುಪ್ಪಣ್ಣ ವಹಿಸುವರು. ಮುಖ್ಯ ಅತಿಥಿಗಳಾಗಿ ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ, ಶಾಸಕ ಎಸ್.ಎ. ರವೀಂದ್ರನಾಥ್, ದೂಡಾ ಅಧ್ಯಕ್ಷ ಕೆ.ಎಂ. ಸುರೇಶ್, ಮಹಾನಗರ ಪಾಲಿಕೆ ಸದಸ್ಯರಾದ ಎಸ್. ಮಂಜುನಾಥ್, ಕೆ.ಎಂ. ವೀರೇಶ್, ವಿಶೇಷ ಆಹ್ವಾನಿತರಾಗಿ ಸಂಜೀವಿನಿ ಆಂಜನೇಯ ದೇವಸ್ಥಾನ ಸಮಿತಿ ಅಧ್ಯಕ್ಷ ಹನುಮಂತಪ್ಪ, ನಾಗರಿಕ ಹಿತರಕ್ಷಣಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಎನ್.ಪಿ. ಮೌನೇಶಪ್ಪ, ಖಜಾಂಚಿ ಓಂಕಾರಪ್ಪ ಉಪಸ್ಥಿತರಿರುವರು.

ಜಿ.ಸಿ. ಜಗದೀಶಪ್ಪ, ಟಿ. ಹನುಮಂತಪ್ಪ (ಸಾಯಿ ಸೆರಾಮಿಕ್ಸ್), ಜಿ. ಇಂದ್ರಪ್ಪ (ಲಕ್ಷ್ಮಿ ವೆಂಕಟೇಶ್ವರ ಗ್ರಾನೈಟ್) ಸೇವಾಕರ್ತರಾಗಿದ್ದಾರೆ.

ನಾಳೆ ಗುರುವಾರ ಸಂಜೆ 6 ರಿಂದ ದಾನಿಗಳಾದ ಶ್ರೀಮತಿ ಸಾವಿತ್ರಮ್ಮಮತ್ತು ನಿವೃತ್ತ ಉಪನ್ಯಾಸಕ ಬಿ. ತಿಮ್ಮಣ್ಣ ಹಾಗೂ ಉದಯಕುಮಾರ್ ಅವರಿಂದ ಅನ್ನ ಸಂತರ್ಪಣೆ ಕಾರ್ಯಕ್ರಮ ಏರ್ಪಡಿಸಲಾಗಿದೆ.

ದಿನಾಂಕ 2ರ ಶುಕ್ರವಾರ ಸಂಜೆ 4 ಗಂಟೆಗೆ ಕೀಲು ಕುದುರೆ, ಡೊಳ್ಳು ಕುಣಿತದ ಮೆರವಣಿಗೆಯೊಂದಿಗೆ ಗಣೇಶ ಮೂರ್ತಿಯನ್ನು ವಿಸರ್ಜಿಸಲಾಗುತ್ತದೆ.

## ಮಳಲ್ಕೆರೆಯಲ್ಲಿ ಒಂದೇ ವೇದಿಕೆಯಲ್ಲಿ ಗಣಪತಿ ಮೂರ್ತಿ ಪ್ರತಿಷ್ಠಾಪನೆಗೆ ಸಿದ್ಧತೆ

ದಾವಣಗೆರೆ ತಾಲ್ಲೂಕಿನ ಮಳಲ್ಕೆರೆ ಗ್ರಾಮದಲ್ಲಿ ಎಲ್ಲಾ ವರ್ಗದ ಜನರು ಸೇರಿ ಒಂದೇ ವೇದಿಕೆಯಲ್ಲಿ ಗಣಪತಿ ಮೂರ್ತಿಯನ್ನು ಪ್ರತಿಷ್ಠಾಪಿಸಲು ಎಲ್ಲಾ ಸಿದ್ಧತೆಗಳನ್ನು ನಡೆಸಿದ್ದಾರೆ. ಮೂರು ದಿನಗಳ ಕಾಲ ಗಣಪತಿ ಮೂರ್ತಿಗೆ ವಿಶೇಷ ಪೂಜೆ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ.

ಗ್ರಾ.ಪಂ. ಅಧ್ಯಕ್ಷರಾದ ಶ್ರೀಮತಿ ರೇಣುಕ ಅಣ್ಣಪ್ಪ, ಉಪಾಧ್ಯಕ್ಷರಾದ ಶ್ರೀಮತಿ ಗಂಗಮ್ಮ ಪ್ರಕಾಶ್ ಅವರುಗಳ ನೇತೃತ್ವದಲ್ಲಿ ಗ್ರಾಮದ ಎಲ್ಲಾ ಹಿರಿಯರು, ಯುವಕರು ಸೇರಿ ಈ ಉತ್ಸವವನ್ನು ಆಚರಿಸಲಾಗುತ್ತದೆ ಎಂದು ಕನ್ವೀನರ್ ಮತ್ತು ವರ್ತಕ ಎಂ.ಎಸ್. ಮಹೇಶ್ವರಯ್ಯ ತಿಳಿಸಿದ್ದಾರೆ.

## ರಸ್ತೆ ಅಪಘಾತದಲ್ಲಿ ಅಪರಿಚಿತನ ಸಾವು

ದಾವಣಗೆರೆ, ಆ.30- ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಆರಾಧ್ಯ ಸ್ಟೀಲ್ ಫ್ಯಾಕ್ಟರಿ ಬಳಿ ಮೊನ್ನೆ ನಡೆದ ರಸ್ತೆ ಅಪಘಾತದಲ್ಲಿ ಓರ್ವ



ಯುವಕ ಗಾಯಗೊಂಡಿದ್ದು, ಜಿಲ್ಲಾ ಆಸ್ಪತ್ರೆಗೆ ಚಿಕಿತ್ಸೆಗೆಂದು ದಾಖಲಿಸಿದಾಗ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾನೆ.

ಸುಮಾರು 28 ವರ್ಷ ವಯಸ್ಸಿನ ಈತ ಕಪ್ಪು-ಬಿಳಿ ಗೆರೆಯುಳ್ಳ ಬೂದು ಬಣ್ಣದ ಟೀ-ಷರ್ಟ್, ನೀಲಿ ನಿಕ್ಕರ್, ಕಡು ನೀಲಿ ಕಾಚಾ ತೊಟ್ಟಿರುತ್ತಾನೆ. ಮೃತನ ಬಲಗೈ ಮೇಲೆ ಹೂವಿನ ಆಕಾರದ ವೃತ್ತಾಕಾರವಿರುವ ಹಚ್ಚೆ ಗುರುತು, ಬಲಗೈ ಮುಂಗೈ ಕೆಳಗೆ ಮಚ್ಚೆ ಗುರುತಿದೆ. ಕೆಂಪು-ಹಳದಿ ಎಳೆಯ ದಾರ ಕಟ್ಟಿರುತ್ತದೆ.

ಸಂಬಂಧಪಟ್ಟವರು ಕಂಟ್ರೋಲ್ ರೂಂ 08192-253100, ಗ್ರಾಮಾಂತರ ಪೊಲೀಸ್ ಠಾಣೆ (01892-262555, ಗ್ರಾಮಾಂತರ ಪೊಲೀಸ್ ಠಾಣೆ ನಿರೀಕ್ಷಕ (94808 03256) ರನ್ನು ಸಂಪರ್ಕಿಸಬಹುದು.

## ಲೋಕಿಕೆರೆ : ಅಪರಿಚಿತನ ಶವ ಪತ್ತೆ



ದಾವಣಗೆರೆ, ಆ.30- ಲೋಕಿಕೆರೆಯ ಬಳಿ ರಸ್ತೆಯ ಬದಿ ಬಿದ್ದಿದ್ದ ವ್ಯಕ್ತಿಯನ್ನು ನಾಗರಿಕರು ಚಿಕಿತ್ಸೆಗೆಂದು ಜಿಲ್ಲಾ ಆಸ್ಪತ್ರೆಗೆ ದಾಖಲಿಸಿದಾಗ ಆತ ನಿನ್ನೆ ರಾತ್ರಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾನೆ. ಸುಮಾರು 60 ವರ್ಷ ವಯಸ್ಸಿನ ಈ ವ್ಯಕ್ತಿ ಬಿಳಿ ಪಂಚೆ, ತುಂಬು ತೋಳಿನ ಬಣ್ಣದ ಶರ್ಟ್ ಧರಿಸಿದ್ದಾರೆ. ಸಂಬಂಧಪಟ್ಟವರು ಹದಡಿ ಪೊಲೀಸ್ ಠಾಣೆಯನ್ನು ಸಂಪರ್ಕಿಸಬಹುದಾಗಿದೆ.



ಶಿವ
5ನೇ ವರ್ಷದ
ಹಿಂದೂ ಮಹಾಗಣಪತಿ ದಾವಣಗೆರೆ ಟ್ರಸ್ಟ್ (ರಿ.) ದಾವಣಗೆರೆ ಜಿಲ್ಲೆ
ದಿನಾಂಕ : 31.08.2022 ಬುಧವಾರ ಸಂಜೆ 6.00ಕ್ಕೆ ಸರ್ಕಾರಿ ಹೈಸ್ಕೂಲ್ ಮೈದಾನ, ದಾವಣಗೆರೆ.
ದಿವ್ಯ ಸಾನ್ನಿಧ್ಯ : ಶ್ರೀ ಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ ಶ್ರೀ ತರಳಬಾಳು ಜಗದ್ಗುರು
ಶ್ರೀ ಶ್ರೀ ಶ್ರೀ 1108 ಪರಮಪೂಜ್ಯ ಡಾ।। ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು, ಬೃಹನ್ಮಠ, ಸಿರಿಗೆರೆ.
ಗೌರಿ-ಗಣೇಶ ಹಬ್ಬದ ಶುಭಾಶಯಗಳು...
ಸರ್ವರಿಗೂ ಆದರದ ಸ್ವಾಗತ ಸುಸ್ವಾಗತ :
ಶುಭ ಕೋರುವವರು : ಜೊಳ್ಳಿ ಗುರು ಟ್ರಸ್ಟಿನ ಸಂಸ್ಥಾಪಕ ಅಧ್ಯಕ್ಷರು ಹಾಗೂ ಆದಿತ್ಯ ಅಲ್ಯೂಮಿನಿಯಂ ಮಂಜುನಾಥ್
ಶ್ರೀ ಜೊಳ್ಳಿ ಗುರು
ಸಂಸ್ಥಾಪಕ ಅಧ್ಯಕ್ಷರು, ಹಿಂದೂ ಮಹಾಗಣಪತಿ, ದಾವಣಗೆರೆ ಜಿಲ್ಲೆ.
ಮೊ. : 98450 95004, 97392 47050
ಎನ್. ಮಂಜುನಾಥ್
ಆದಿತ್ಯ ಅಲ್ಯೂಮಿನಿಯಂ, ದಾವಣಗೆರೆ

# 'ಗಣಪತಿ ಹುಟ್ಟಿನ ಮತ್ತೊಂದು ಕಥೆ'



ಗಣಪತಿಯ ಹುಟ್ಟಿನ ಬಗ್ಗೆ ಹಾಗೂ ಗಣಪತಿಗೆ ಆನೆಯ ಮುಖ ಬಂದ ಬಗ್ಗೆ ಸಾಮಾನ್ಯವಾಗಿ ನಂಬಿರುವ ಕಥೆ ಒಂದಾದರೆ ಬ್ರಹ್ಮ ವೈವರ್ತ ಪುರಾಣ ಹೇಳುವುದೇ ಇನ್ನೊಂದು ಕಥೆ. ಅದನ್ನಿಲ್ಲಿ ಸಂಕ್ಷಿಪ್ತವಾಗಿ ಕೊಡಲಾಗಿದೆ. ಇದು ಸ್ವಾರಸ್ಯಕರವೂ ಆಗಿದೆ.

**- ಎಚ್.ಬಿ.ಮಂಜುನಾಥ,** ಹಿರಿಯ ಪತ್ರಕರ್ತ

ಗಣಪತಿಯ ಹುಟ್ಟಿನ ಬಗ್ಗೆ ಸಾಮಾನ್ಯವಾಗಿ ಎಲ್ಲರೂ ತಿಳಿದಿರುವುದು ಏನೆಂದರೆ ಪಾರ್ವತಿಯ ಮೈ ಮಣ್ಣಿನಿಂದ ಸೃಷ್ಟಿಯಾದ ಮಗುವಿನ ಶಿರವನ್ನು ಗೊತ್ತಿಲ್ಲದೇ ಶಿವ ತ್ರಿಶೂಲ ದಿಂದ ತೆಗೆದ, ನಂತರ ತಪ್ಪಿನ ಅರಿವಾಗಿ ಆನೆಯ ಶಿರವನ್ನು ಅದಕ್ಕೆ ಜೋಡಿಸಿ 'ಗಣಾಧಿಪತಿ' ಎಂದು ಹರಸಿದ ಎಂಬುದು ಕಥೆ. ಆದರೆ, ಅಷ್ಟಾದಶ ಪುರಾಣಗಳಲ್ಲಿ ಒಂದಾದ 'ಬ್ರಹ್ಮವೈವರ್ತ ಪುರಾಣ' ದಲ್ಲಿ ಗಣಪತಿಯ ಹುಟ್ಟಿನ ಬಗ್ಗೆ ಮತ್ತೊಂದು ಕಥೆಯೇ ಇದೆ. ಇದು ಸ್ವಾರಸ್ಯಕರವೂ ಆಗಿದೆ.

ಬ್ರಹ್ಮ ವೈವರ್ತ ಪುರಾಣದ ಗಣಪತಿ ಖಂಡದಲ್ಲಿ ಹೇಳುವ ಪ್ರಕಾರ, ಗಣಪತಿಯು ಪಾರ್ವತಿಯ ಗರ್ಭ ಸಂಜಾತನಾಗಿದ್ದು, ಆಕೆಯ ಉದರದಿಂದ ಜನಿಸಿದ ಮಗುವಿನ ತೊಟ್ಟಿಲು ಕಾರ್ಯದಲ್ಲಿ ದೇವಾನುದೇವತೆಗಳೆಲ್ಲರೂ ಆಗಮಿಸಿ, ಆಶೀರ್ವಾದ ಪೂರ್ವಕವಾಗಿ ವರಗಳನ್ನು ಕೊಟ್ಟಾಗ ವಿಷ್ಣುವು ಆ ಮಗುವಿಗೆ ಅಂದರೆ ಗಣಪತಿಗೆ 'ಜ್ಞಾನಿಯಾಗು, ಪರಾಕ್ರಮಿಯಾಗು' ಎಂದರೆ ಬ್ರಹ್ಮನು 'ಕೀರ್ತಿ ಶಾಲೆಯಾಗು' ಎಂದೂ ಶಿವನು 'ದಾನ ಬುದ್ಧಿ, ವಿದ್ಯೆ ಮತ್ತು ಪುಣ್ಯದ ನೆಲೆಯಾಗು' ಎಂದೂ ಧರ್ಮನು 'ಧರ್ಮಸ್ಥನಾಗು' ಎಂದೂ ಲಕ್ಷ್ಮಿಯು 'ಸದಾ ಸೌಭಾಗ್ಯದಾತನಾಗು' ಎಂದೂ ಸರಸ್ವತಿಯು 'ಕವಿತೆ ಮತ್ತು ವಿದ್ಯಾಧಾರಣ ಶಕ್ತಿ ಉಳ್ಳವನಾಗು' ಎಂದೂ ವೇದಮಾತೆ ಗಾಯತ್ರಿಯು 'ವೇದಾಧಿಪತ್ಯ ನಿನಗಾಗಲೆಂದೂ' ಹಿಮಾಲಯವು 'ನಿಶ್ಚಲತೆಯನ್ನೂ', ಮೇನಾ ದೇವಿಯು 'ಗಾಂಭೀರ್ಯತೆಯನ್ನೂ, ಸಮುದ್ರವು ರತ್ನಾಕರತ್ವವನ್ನೂ,' ಭೂದೇವಿಯು 'ಕ್ಷಮಾಗುಣ' ಮುಂತಾಗಿ ವರಗಳನ್ನಾಗಿ ಆ ಮಗುವಿಗೆ ಅಂದರೆ ಗಣಪತಿಗೆ ನೀಡಿದಾಗ ಅಲ್ಲಿಗೆ ಬಂದಿದ್ದ ಶನಿದೇವರು ತಾನು ಮಗುವನ್ನು ನೋಡದೆ ದೂರದಿಂದಲೇ ಆಶೀರ್ವಾದ ಮಾಡಿ ಹೋಗುವುದಾಗಿಯೂ, ತನ್ನ



ದೃಷ್ಟಿಯು ಮಗುವಿನ ಮೇಲೆ ಬೀಳುವುದು ಬೇಡ ಎಂದೂ ಹೇಳಿದಾಗ ಪಾರ್ವತಿಯು ಅದಕ್ಕೆ ಒಪ್ಪದೇ ಮಗುವನ್ನು ನೋಡಿಯೇ ಆಶೀರ್ವದಿಸುವಂತೆ ಶನಿ ದೇವರನ್ನು ಒತ್ತಾಯಿಸಿದಳು.

ಶನಿದೇವರ ಅಧೋದೃಷ್ಟಿ ಆ ಮಗುವಿನ ಮೇಲೆ ಬೀಳುತ್ತಲೇ ಮಗುವಿನ ಶಿರ ಅಂದರೆ ತಲೆ ಹೋಯಿತು. ಆಗ ಕೋಪಗೊಂಡ ಪಾರ್ವತಿಯು 'ನಿನಗೆ ಕಾಲಿಲ್ಲದೇ ಹೋಗಲಿ, ಕುಂಟನಾಗು' ಎಂದು ಶನಿ ದೇವರಿಗೆ ಶಾಪ ಕೊಟ್ಟಳು. ಪಾರ್ವತಿಯ ಶಾಪದಿಂದಾಗಿ ಮಂದಗತಿಯವನಾದ ಅಂದರೆ ನಿಧಾನಗತಿಯವನಾದ ಶನಿಯು, ಸೂರ್ಯನ ಸುತ್ತ ಸುತ್ತಲು ಏಳೂವರೆ ವರ್ಷ ತೆಗೆದುಕೊಳ್ಳುವಂತಾಯಿತು. ಮಗುವಿನ ಶಿರ ಹೋದ ಬಗ್ಗೆ ಪಾರ್ವತಿಯು ದುಃಖಿಸಿದಾಗ ಶಿವನು ಐರಾವತದ ಸಂತಾನವಾದ ಆನೆಯೊಂದರ ಶಿರವನ್ನು ತರಿಸಿ ಆ ಮಗುವಿಗೆ ಜೋಡಿಸಿ, 'ಗಣಾಧಿಪತಿ'ಯೆಂಬುದಾಗಿ ಹರಸಿದ ಎಂದು ಬ್ರಹ್ಮ ವೈವರ್ತ ಪುರಾಣದ 'ಗಣಪತಿ ಖಂಡ'ವು ಹೇಳುತ್ತದೆ.

ಪಾರ್ವತಿಯು ತಾನಾಗಿಯೇ ಶನಿದೇವರನ್ನು ಒತ್ತಾಯಿಸಿ, ಮಗುವನ್ನು ನೋಡುವಂತೆ ಮಾಡಿದ್ದು, ಅದರಿಂದಾಗಿ ಮಗುವಿನ ತಲೆ ಹೋಗಿದ್ದು, ತಾನು ಶನಿ ದೇವರಿಗೆ ಶಾಪ ಕೊಟ್ಟಿದ್ದು, ಹೀಗೆಲ್ಲಾ ಏಕೆ ಆಯಿತೆಂದು ವಿಷ್ಣುವನ್ನು ಕೇಳಿದಾಗ ವಿಷ್ಣುವು 'ನಾನು ಬೇರೆಯಲ್ಲ, ಗಣಪತಿ ಬೇರೆಯಲ್ಲ, ಹಿಂದೆ ಕಶ್ಯಪನ ಪತ್ನಿಯಾಗಿದ್ದ ದನುವಿಗೆ ಮಾಲಿ, ಸುಮಾಲಿ ಹಾಗೂ ಮಾಲ್ಯವಂತ ಎಂಬ ಮೂವರು ಮಕ್ಕಳಿದ್ದರು, ಅದರಲ್ಲಿ ಸುಮಾಲಿಯನ್ನು ವಿಷ್ಣುವಾದ ನಾನು ಕೊಂದಾಗ ಕೋಪಗೊಂಡ ಕಶ್ಯಪರು 'ಶಿವ ಪಾರ್ವತಿಯ ಮಗನಾಗಿ ನೀನು ಜನಿಸಿದಾಗ ನನ್ನ ತಲೆ ಹೋಗಲಿ' ಎಂದು ಶಾಪ ಕೊಟ್ಟಿದ್ದರು. ಅದರಿಂದಾಗಿ ಹೀಗೆಲ್ಲಾ ಆಯ್ತು ಎಂದು ವಿಷ್ಣು ಹೇಳಿದ.

ಪರಶುರಾಮನು ಕಾರ್ತ್ಯವೀರ್ಯಾರ್ಜುನನನ್ನು ಕೊಂದು ಈ ಸುದ್ದಿಯನ್ನು ತನ್ನ ಗುರುವಿಗೆ ಹೇಳಲೆಂದು ಹೋಗುತ್ತಿರುವಾಗ ಮಾರ್ಗದಲ್ಲಿ ಗಣಪತಿಯು ತಡೆದನು, ಕೋಪಗೊಂಡ ಪರಶುರಾಮನು ತನ್ನ ಕೊಡಲಿಯಿಂದ ಗಣಪತಿಯ ದಂತ ತುಂಡರಿಸಿದ, ಇದರಿಂದಾಗಿ ಗಣಪತಿಯು 'ಏಕದಂತ' ನಾದನು ಎಂದೂ ಸಹ ಬ್ರಹ್ಮವೈವರ್ತ ಪುರಾಣದ ಗಣಪತಿ ಖಂಡವು ಹೇಳುತ್ತದೆ.

# ಆತ್ಮಹತ್ಯೆಯಲ್ಲಿ ದಿನಗೂಲಿ, ಸ್ವ ಉದ್ಯೋಗಿಗಳೇ ಹೆಚ್ಚು

## ಕೃಷಿಕರಿಗಿಂತ ದಿನಗೂಲಿಗಳ ಆತ್ಮಹತ್ಯೆ ಮೂರೂವರೆ ಪಟ್ಟು ಹೆಚ್ಚು

ನವದೆಹಲಿ, ಆ. 30 - 2021ರಲ್ಲಿ 1.64 ಲಕ್ಷ ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ದಿನಗೂಲಿಯವರು ಹಾಗೂ ಸ್ವ ಉದ್ಯೋಗಿಗಳೇ ಆತ್ಮಹತ್ಯೆ ಮಾಡಿಕೊಂಡವರಲ್ಲಿ ಹೆಚ್ಚಾಗಿದ್ದಾರೆ.

ರಾಷ್ಟ್ರೀಯ ಅಪರಾಧ ದಾಖಲೆಗಳ ದಳ (ಎನ್.ಸಿ.ಆರ್.ಬಿ.) ಈ ವರದಿಯನ್ನು ರೂಪಿಸಿದ್ದು, ಆತ್ಮಹತ್ಯೆ ಮಾಡಿಕೊಂಡವರಲ್ಲಿ ಪುರುಷರ ಪಾಲು ಶೇ.71.95ರಷ್ಟಾಗಿದೆ.

ಆತ್ಮಹತ್ಯೆ ಮಾಡಿಕೊಂಡಿರುವ ಪುರುಷರಲ್ಲಿ 37,751 ಜನರು ದಿನಗೂಲಿ ಕಾರ್ಮಿಕರಾಗಿದ್ದಾರೆ. 18,803 ಜನ ಸ್ವಯಂ ಉದ್ಯೋಗಿಗಳು ಹಾಗೂ 11,724 ಜನರು ನಿರುದ್ಯೋಗಿಗಳಾಗಿದ್ದಾರೆ. ಈ ಅವಧಿಯಲ್ಲಿ ಆತ್ಮಹತ್ಯೆ ಮಾಡಿಕೊಂಡ ಕೃಷಿಕರ ಸಂಖ್ಯೆ 10,881 ಆಗಿದೆ. ಇವರಲ್ಲಿ 5,318 ಕೃಷಿಕರು ಹಾಗೂ 5,563 ಜನರು ಕೃಷಿ ಕಾರ್ಮಿಕರಾಗಿದ್ದಾರೆ. ಒಟ್ಟು ಆತ್ಮಹತ್ಯೆಯಲ್ಲಿ ಕೃಷಿಕರ ಪ್ರಮಾಣ ಶೇ.6.2ರಷ್ಟಾಗಿದೆ.

ಕೃಷಿಕರಿಗಿಂತ ಮೂರೂವರೆ ಪಟ್ಟು ಹೆಚ್ಚು ಕೂಲಿ ಕಾರ್ಮಿಕರು ಸಾವನ್ನಪ್ಪಿದ್ದಾರೆ. ಕೃಷಿಕರಿಗಿಂತ ಎರಡು ಪಟ್ಟು ಸ್ವಯಂ ಉದ್ಯೋಗಿಗಳು ಆತ್ಮಹತ್ಯೆಗೆ ಶರಣಾಗಿದ್ದಾರೆ. ಇದೇ ಅವಧಿಯಲ್ಲಿ 45,026 ಮಹಿಳೆಯರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಪಶ್ಚಿಮ ಬಂಗಾಳ, ಬಿಹಾರ, ಜಾರ್ಖಂಡ್, ಒಡಿಶಾ, ತ್ರಿಪುರ, ಮಣಿಪುರ, ಅರುಣಾಚಲ ಪ್ರದೇಶ, ಉತ್ತರಾಖಂಡ, ಚಂಡೀಘಢ, ಲಕ್ಷದ್ವೀಪ ಹಾಗೂ ಪುದುಚೆರಿಗಳಲ್ಲಿ ರೈತರಾರೂ ಆತ್ಮಹತ್ಯೆ ಮಾಡಿಕೊಂಡಿಲ್ಲ ಎಂದು ವರದಿಯಲ್ಲಿ ತಿಳಿಲಾಗಿದೆ.

ಸರ್ಕಾರಿ ಉದ್ಯೋಗಗಳಲ್ಲಿರುವ 1,898 ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಖಾಸಗಿ ಉದ್ಯಮಗಳಲ್ಲಿರುವ 11,431 ಜನ ಆತ್ಮಹತ್ಯೆಗೆ ಗುರಿಯಾಗಿದ್ದಾರೆ. ಆತ್ಮಹತ್ಯೆ ಮಾಡಿಕೊಂಡವರಲ್ಲಿ ಶೇ.64.2ರಷ್ಟು ಜನರ ವೇತನ ವರ್ಷಕ್ಕೆ ಲಕ್ಷ ರೂ.ಗಳಿಗೂ ಕಡಿಮೆಯಾಗಿದೆ. ಶೇ.31.6ರಷ್ಟು ಆತ್ಮಹತ್ಯೆ ಮಾಡಿಕೊಂಡವರ ವಾರ್ಷಿಕ ವೇತನ 1 ಲಕ್ಷ ರೂ.ಗಳಿಂದ 5 ಲಕ್ಷ ರೂ.ಗಳಷ್ಟಿದೆ.

# ಹಿಂದೂ ಗಣಪತಿ ಪ್ರತಿಷ್ಠಾಪನೆಗೆ ಸಿದ್ಧ



**ಮಲೇಬೆನ್ನೂರು**

ಮಲೇಬೆನ್ನೂರು, ಆ. 30 - ಇಲ್ಲಿನ ನೀರಾವರಿ ಇಲಾಖೆ ಆವರಣದಲ್ಲಿ ಹಿಂದೂ ಮಹಾಗಣಪತಿ ಪ್ರತಿಷ್ಠಾಪನೆಗಾಗಿ ಬೃಹತ್ ವೇದಿಕೆ ಸಿದ್ಧಗೊಳ್ಳುತ್ತಿದ್ದು, ಎಲ್ಲರನ್ನೂ ಕೈಬೀಸಿ ಕರೆಯುವಂತೆ ಸಜ್ಜಾಗುತ್ತಿದೆ.

ಇದೇ ಮೊದಲ ಬಾರಿಗೆ ಪಟ್ಟಣದಲ್ಲಿ ಇಷ್ಟೊಂದು ಅದ್ಧೂರಿಯಾಗಿ ಗಣೇಶ ಪ್ರತಿಷ್ಠಾಪನೆ ನಡೆಯುತ್ತಿದ್ದು, ವಿಶೇಷವಾಗಿ ಯುವಕರು ಬಹಳ ಆಸಕ್ತಿ ವಹಿಸಿ ದೇಣಿಗೆ ಸಂಗ್ರಹಿಸಿ ಅರ್ಥಪೂರ್ಣ ಉತ್ಸವಕ್ಕಾಗಿ ಶ್ರಮಿಸುತ್ತಿದ್ದಾರೆ.

ಮಾಜಿ ಶಾಸಕ ಬಿ.ಪಿ. ಹರೀಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಜಿ.ಪಂ. ಮಾಜಿ ಸದಸ್ಯ ಬಿ.ಎಂ. ವಾಗೀಶ್‌ಸ್ವಾಮಿ, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಅವರು ಈ ಹಿಂದೂ ಮಹಾಗಣಪತಿ ಪ್ರತಿಷ್ಠಾಪನೆಗೆ ಮುತುವರ್ಜಿ ವಹಿಸಿದ್ದಾರೆ.

ಹಿಂದೂ ಮಹಾಗಣಪತಿ ಸಮಿತಿ ಅಧ್ಯಕ್ಷ ಯರೇಚಿಕ್ಕನಹಳ್ಳಿ ಚಂದ್ರಶೇಖರ್ ನೇತೃತ್ವದಲ್ಲಿ ಬಿಜೆಪಿಯ ಪುರಸಭೆ ಸದಸ್ಯರು, ಯುವಕರು ಹಗಲಿರುಳು ಶ್ರಮಿಸುತ್ತಿದ್ದಾರೆ.

ಸೋಮವಾರ ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ಎಪಿಎಂಸಿ ಮಾಜಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್ ಅವರು ಸಿದ್ಧತೆ ಪರಿಶೀಲಿಸಿದರು. ಯರೇಚಿಕ್ಕನಹಳ್ಳಿ ಚಂದ್ರಶೇಖರ್, ಚಿಟ್ಟಕ್ಕಿ ನಾಗರಾಜ್, ಬೆಣ್ಣೆಹಳ್ಳಿ ಸಿದ್ದೇಶ್, ಪಿ.ಆರ್. ರಾಜು, ಬಿ. ಮಂಜುನಾಥ್, ಎ.ಕೆ. ಲೋಕೇಶ್, ಬಸವರಾಜ್ ದೊಡ್ಮನಿ, ಕೊಮಾರನಹಳ್ಳಿ ಸುನೀಲ್ ಮತ್ತಿತರರು ಈ ವೇಳೆ ಉಪಸ್ಥಿತರಿದ್ದರು.

# ಛತ್ತೀಸ್‌ಗಡದ ಸಿಎಂ ಭೇಟಿ ಮಾಡಿದ ಮೇಯರ್



ದಾವಣಗೆರೆ, ಆ.30- ಅಖಿಲ ಭಾರತ ಮೇಯರ್‌ಗಳ ಪರಿಷತ್ ವತಿಯಿಂದ ಛತ್ತೀಸ್‌ಗಡದ ರಾಜಧಾನಿ ರಾಯಪುರದಲ್ಲಿ ಮೊನ್ನೆ ಹಮ್ಮಿಕೊಳ್ಳಲಾಗಿದ್ದ 50ನೇ ವಾರ್ಷಿಕ ಅಖಿಲ ಭಾರತ ಮೇಯರ್‌ಗಳ ಸಮ್ಮೇಳನದಲ್ಲಿ ಮಹಾಪೌರರಾದ ಶ್ರೀಮತಿ ಜಯಮ್ಮ ಗೋಪಿನಾಯ್ಕ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಮೇಯರ್ ಜಯಮ್ಮ ಅವರು ಛತ್ತೀಸ್‌ಗಡ ರಾಜ್ಯದ ರಾಜ್ಯಪಾಲರಾದ ಶ್ರೀಮತಿ ಅನುಸೂಯ ಉಯ್ಕೆ, ಮುಖ್ಯಮಂತ್ರಿ ಭೂಪೇಶ್ ಸಿಂಗ್ ಬಾಗೆಲ್ ಅವರನ್ನು ಭೇಟಿ ಮಾಡಿದ್ದರು.

# ಮುರುಘಾ ಶರಣರು ತಪ್ಪು ಮಾಡಿಲ್ಲ

ದಾವಣಗೆರೆ, ಆ. 30 - ಮುರುಘಾ ಶರಣರು ಯಾವುದೇ ತಪ್ಪು ಮಾಡಿಲ್ಲ. ಷಡ್ಯಂತ್ರದಿಂದ ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಜಿಲ್ಲಾ ಪಂಚಾಯ್ತಿಯ ದಿಶಾ ಸಮಿತಿ ಸದಸ್ಯರೂ ಆಗಿರುವ ವಕೀಲ ಕೆ.ಹೆಚ್. ವೆಂಕಟೇಶ್ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಅವರು, ಸ್ವಾಮೀಜಿ ವಿರುದ್ಧ ದಾಖಲಾಗಿರುವ ಪ್ರಕರಣ ಒಳಸಂಚಿನಿಂದ ಕೂಡಿದ್ದು, ಅವರು ನಿರ್ದೋಷಿಯಾಗಿ ಹೊರ ಬರಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಮುಖಂಡರಾದ ಆರ್.ಹನುಮಂತಪ್ಪ ಉಪಸ್ಥಿತರಿದ್ದರು.

## ಪರಿಸರ ಸ್ನೇಹಿ ಗಣಪತಿ

ಓಂ ಗಂ ಗಣಪತಿಯೇ ನಮಃ



ಸರ್ವ ವಿಘ್ನಗಳ
ನಿವಾರಕ ಸರ್ವ
ಕಾರ್ಯೇಶು
ನಿವಾರಕಗಳ ಗಣಪ ....!!!

ಹಲವು ಭಕ್ಷ್ಯಗಳ
ಭೋಜಕ ಹಲವು
ಪ್ರಿಯಕರ ಭೋಜಕ
ಪ್ರಿಯ ಮೋದಕ ಪ್ರಸಾದದ ಗಣಪ....!!!

ಇಲಿಯ ವಾಹನ
ಸವಾರಕ ಗಣಪ
ಡೊಳ್ಳು ಹೊಟ್ಟೆಗೆ
ಹಾವನ್ನು ಕಟ್ಟಿಕೊಂಡ ಕರಿಮುಖ...!!!

ಸಕಲ ಜ್ಞಾನಿಯ ಗಜಮುಖ
ಸಕಲ ವರದಯಪಾಲಿಸುವ
ಏಕದಂತ ಅತೀ ವೇಗವಾಗಿ
ಬರೆಯುವ ಲಿಪಿಕಾರ ಗಣಪ....!!!

ಗರಿಕೆ ಎಕ್ಕದ ಹೂವು
ಆಶಿಸುವ ಆಶಾ ಗಣಪ
ಪ್ರಥಮ ಪೂಜೆಗೆ
ಆರಾಧಿಸುವ ಆದ್ಯತೆಯ ಲಂಭೋಧರ...!!!

ಗಣಪತಿಯ ಉತ್ಸವದ ಮೂಲಕ
ದೇಶ ಸ್ವತಂತ್ರ ಪಡೆದ ಆಚರಿಸುವುದರ ಮೂಲಕ
ಬಾಲ ಗಂಗಾಧರರು ರೂವಾರಿಯ ದೇಶದ ದೇಶವೇ
ಆಚರಿಸುವ ಸಮಗ್ರತೆಯ ಈ ಗಣಪತಿ ಹಬ್ಬವು...!!!

**- ಸಂಗಮ್ ಟಿ. ಜಿ.**
ಕೊಟ್ಟೂರು. 8050833928

## ಶರಣು ನಿನಗೆ ಗಜಾನನ

ತಾಯಿಯ ಹಿಂಬಾಲಿಸಿ ಬರುವನು ಗಣಪ
ಚೌತಿಯ ದಿನವೇ ವಿನಾಯಕ
ಮತಿ ಪ್ರೇರಿಸಿ ಹರಸು ವಿಘ್ನ ವಿನಾಶಕ
ಸುಪ್ರೀತನಾಗಿ ಉದ್ಧರಿಸು ಪಾರ್ವತಿ ಸುತನೆ

ಶರಣು ನಿನಗೆ ಗಜಾನನ
ಗೌರಿ ನಂದನ ಶುಭಾನನ
ಕಾರ್ಯಾರಂಭ ದಿ ವಂದಿಪೆ ಫಲದಾಯಕ
ಕರ ಮುಗಿದು ಬೇಡುವೆ ಪಾಪ ನಾಶಕ

ಗಿರಿಜಾನಂದನ ಪಾಹಿ ಬೆನಕ
ಗರಿಕೆ ಪತ್ರೆ ನೀಡಿ ಪೂಜಿಪೇ
ಅರಿಗಳ ನಿಗ್ರಹಿಸಿ ಸಲಹು ಗಣೇಶನೇ
ಶರಣಾಗುವೆ ನಿನಗೆ ವಿಘ್ನೇಶನೇ

ಷಣ್ಮುಖ ಸೋದರ ಲಂಬೋಧರನೇ
ಸರ್ವ ಜನಪ್ರಿಯ ಅಂಬಾಸುತನೆ
ಪಾರ್ವತಿ ಮಾನಸ ಪುತ್ರನೇ
ಪಾಶಾಂಕುಷ ದರ ಮೂಷಿಕ ವಾಹನನೇ

**- ಕೋಮಲ ವಿ. ಕುಮಾರ್,** ದಾವಣಗೆರೆ.

# ದೊಡ್ಡಪೇಟೆಯಲ್ಲಿ ಇಂದಿನಿಂದ ವಿನಾಯಕ ಮಹೋತ್ಸವ

ದಾವಣಗೆರೆ ದೊಡ್ಡಪೇಟೆಯಲ್ಲಿರುವ ಶ್ರೀ ವಿನಾಯಕ ಸ್ವಾಮಿ ದೇವಸ್ಥಾನದಲ್ಲಿ ವಿನಾಯಕ ಮಹೋತ್ಸವವನ್ನು ಆಚರಿಸಲಾಗುವುದು. ಇಂದು ಬೆಳಿಗ್ಗೆ 10 ಗಂಟೆಗೆ ಶ್ರೀ ವಿಘ್ನೇಶ್ವರ ಸ್ವಾಮಿ ಯನ್ನು ಮೆರವಣಿಗೆ ಮೂಲಕ ಕರೆತಂದು ಭವ್ಯ ಮಂಟಪದಲ್ಲಿ ಪ್ರತಿಷ್ಠಾಪಿಸಲಾಗುವುದು.

ನಾಳೆ ಗುರುವಾರ ರಾತ್ರಿ 7.30 ರಿಂದ ಸಂಗೀತ, ವಚನ ಹಾಗೂ ದಾಸವಾಣಿ ಕಾರ್ಯಕ್ರಮವನ್ನು ಧಾರವಾಡದ ಹಿಂದೂಸ್ಥಾನಿ ಗಾಯಕಿ ವಿಜಯಲಕ್ಷ್ಮಿ ಪೂಜಾರ್ ನಡೆಸಿಕೊಡಲಿದ್ದಾರೆ.

ದಿನಾಂಕ 2 ರ ಶುಕ್ರವಾರ ರಾತ್ರಿ 7.30 ಕ್ಕೆ ಧಾರವಾಡ ಸೌಹಾರ್ದ ಕಲಾ ತಂಡದ ಶ್ರೀಶೈಲ ಉದ್ದಾರ್ ಅವರಿಂದ 'ಜಾನಪದ ರಸ ಸಂಜೆ' ನಡೆಯಲಿದೆ.

ದಿನಾಂಕ 3 ರ ಶನಿವಾರ ರಾತ್ರಿ 7.30 ಕ್ಕೆ ಬೆಂಗಳೂರು ನಾಗಚಂದ್ರಿಕಾ ಭಟ್ ಮತ್ತು ತಂಡದವರು ಸುಗಮ ಸಂಗೀತ ರಸ ಸಂಜೆ ಹಾಗೂ ವಾದ್ಯ ಸಂಗೀತ ವೈಭವ ಕಾರ್ಯಕ್ರಮ ನಡೆಯಲಿದೆ.

ದಿನಾಂಕ 4 ರ ಭಾನುವಾರ ಸಂಜೆ 6 ಕ್ಕೆ ಮಯೂರ ರಥದಲ್ಲಿ ಶ್ರೀ ಸ್ವಾಮಿಯ ಉತ್ಸವ ಮಂಗಳ ವಾದ್ಯದೊಂದಿಗೆ ನಗರದ ಮುಖ್ಯ ಬೀದಿಗಳಲ್ಲಿ ಕೊಂಡೊಯ್ದು ಶ್ರೀ ಸ್ವಾಮಿಯನ್ನು ಹೊಂಡದಲ್ಲಿ ವಿಸರ್ಜಿಸಲಾಗುವುದು.

# ಕೊಕ್ಕನೂರಿನಲ್ಲಿ ಹಂದರಗಂಬ

ಮಲೇಬೆನ್ನೂರು, ಆ. 30 - ಕೊಕ್ಕನೂರು ಗ್ರಾಮದ ಶ್ರೀ ದುರ್ಗಾಂಬಿಕೆ ದೇವಸ್ಥಾನದ ಆವರಣದಲ್ಲಿ ಹಿಂದೂ ಮಹಾಗಣಪತಿ ಪ್ರತಿಷ್ಠಾಪನೆಗೆ ಸೋಮವಾರ ಹಂದರಗಂಬ ಪೂಜೆ ಮಾಡಲಾಯಿತು.

ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಅವರು ಹಂದರಗಂಬಕ್ಕೆ ಪೂಜೆ ಸಲ್ಲಿಸಿ, ಚಾಲನೆ ನೀಡಿದರು. ಗ್ರಾ.ಪಂ. ಅಧ್ಯಕ್ಷ ಓ.ಬಿ. ನಿಂಗನಗೌಡ, ಮಹಾದೇವಪ್ಪ, ಎಸ್‌ಡಿಎಂಸಿ ಅಧ್ಯಕ್ಷ ಟಿ.ಎನ್. ಹನುಮನಗೌಡ, ಗದಿಗೆಪ್ಪ, ವಾಮದೇವಪ್ಪ ಸೇರಿದಂತೆ ನೂರಾರು ಯುವಕರು ಈ ವೇಳೆ ಹಾಜರಿದ್ದರು.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಸೈಟ್ ಬೇಕಾಗಿದೆ**
ದಾವಣಗೆರೆಯ ಯಾವುದೇ ಲೇಔಟ್‌ನಲ್ಲಿ ಸೈಟುಗಳು ಖರೀದಿಗೆ ಬೇಕಾಗಿವೆ.
ಕಿರಣ್ ಬೂಸ್ನೂರ್
98440 63409
(ಸೈಟ್ ಏಜೆಂಟರೂ ಸಹ ಹೇಳಬಹುದು)

**ಸೈಟುಗಳು ಮಾರಾಟಕ್ಕಿವೆ**
40x60 West Indoor ಸ್ಟೇಡಿಯಂ ಹತ್ತಿರ
30x40 East ನೂತನ್ ಕಾಲೇಜ್ ಹತ್ತಿರ,
30x42 North ವಿನಾಯಕ ಬಡಾವಣೆಯಲ್ಲಿ.
40x60 West ವಿವೇಕಾನಂದ ಬಡಾವಣೆಯಲ್ಲಿ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಕೆಲಸಕ್ಕೆ ಬೇಕಾಗಿದ್ದಾರೆ**
ಅಡುಗೆ ಭಟ್ಟರು, ಸರ್ವರ್, ಕ್ಲೀನರ್ ಕೆಲಸ ಮಾಡಲು ಬೇಕಾಗಿದ್ದಾರೆ. ಸಂಪರ್ಕಿಸಿ
ನಿಸರ್ಗ ಫ್ಯಾಮಿಲಿ ರೆಸ್ಟೋರೆಂಟ್
90083 45177

**ಬಾಡಿಗೆಗೆ ಇದೆ**
1. 2BHK ಗ್ರೌಂಡ್ ಫ್ಲೋರ್ ಮನೆ ಈಶ್ವರ್-ಗಣಪತಿ ದೇವಸ್ಥಾನದ ಹಿಂದೆ ವಿದ್ಯಾನಗರ.
2. 30x50 ಗ್ರೌಂಡ್ ಫ್ಲೋರ್ ಕಮರ್ಷಿಯಲ್ ಹಾಲ್, ಕಾಫೀ ಡೇ ಪಕ್ಕ ವಿದ್ಯಾನಗರ.
99725 77991

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್
ಫೋ.: 95135 03000

**LADIES PG BUILDING FOR RENT**
ಸುಸಜ್ಜಿತವಾದ ಮಹಿಳಾ ವಸತಿ ನಿಲಯ ಬಾಡಿಗೆಗಿದೆ.
S.N. Layout Davangere.
Mobi.: 95351 14063
96203 71544 97428 35642

**CHANGE OF NAME**
I, SYED THASEEN HASHAM W/o SYED HASHAM ALI (new name), previously called TAHSEEN SULTANA H.L. D/o ABDUL LATEEF H.S. (old name), R/o #219/1, Near Jendi Katte, Talavara Beedi, Nittuvalli, Davangere - 577004, Karnataka have changed my name as SYED THASEEN HASHAM W/o SYED HASHAM ALI vide affidavit dated 30-08-2022 sworn before Notary M. Prathaparudra, Davangere. Henceforth all my transactions & dealings will be in my new name SYED THASEEN HASHAM W/o SYED HASHAM ALI.


ರಿ.ನಂ.ಡಿ.ಆರ್.ಡಿ.ವಿ.ಜಿ.ಆರ್.ಎಸ್.ಆರ್. /12/25759/99-2000

**ಹೊನ್ನಾಳಿ ಅರ್ಬನ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ. ಲಿ.,**

ನ್ಯಾಮತಿ ರಸ್ತೆ, (ಹೊಸಕೇರಿ ಹಿಂಭಾಗದ ರಸ್ತೆ) ಪೆಟ್ರೋಲ್ ಬಂಕ್ ಎದುರು, ಹೊನ್ನಾಳಿ. ದಾವಣಗೆರೆ (ಜಿಲ್ಲೆ)

**ಪ್ರಕಟಣೆ**

**ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಮಹಾಸಭೆಯ ತಿಳುವಳಿಕೆ ಪತ್ರ**

ಈ ಮೇಲ್ಕಂಡ ಸಹಕಾರ ಸಂಘದ 23 ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ: 18-09-2022 ನೇ ಭಾನುವಾರದಂದು ಬೆಳಗ್ಗೆ 11.00 ಗಂಟೆಗೆ ಶ್ರೀ ಚನ್ನಪ್ಪಸ್ವಾಮಿ ಸಮುದಾಯ ಭವನ ಹಿರೇಕಲ್ಮಠ, ಹೊನ್ನಾಳಿಯಲ್ಲಿ ಸಂಘದ ಅಧ್ಯಕ್ಷರಾದ ಶ್ರೀಯುತ. ಡಾ||.ಹೆಚ್.ಪಿ.ರಾಜ್‌ಕುಮಾರ್ ಇವರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಸಂಘದ ಅರ್ಹ ಸದಸ್ಯರು ಸಭೆಗೆ ಸಮಯಕ್ಕೆ ಸರಿಯಾಗಿ ಹಾಜರಾಗಲು ಈ ಮೂಲಕ ಕೋರುತ್ತಿದ್ದೇವೆ.

ಈ ಕುರಿತು ಪ್ರತಿ ಅರ್ಹ ಸದಸ್ಯರುಗಳಿಗೂ ಅವರ ನೋಂದಾಯಿತ ಅಂಚೆ ವಿಳಾಸಕ್ಕೆ ತಿಳುವಳಿಕೆ ಪತ್ರವನ್ನು ಅಂಚೆ ಮೂಲಕ ಕಳಿಸಿಕೊಡಲಾಗಿದೆ. ಒಂದು ವೇಳೆ ಕಾರಣಾಂತರಗಳಿಂದ ಸದರಿ ತಿಳುವಳಿಕೆ ಪತ್ರ ಇದುವರೆಗೂ ಯಾರಿಗೆ ತಲುಪಿರುವುದಿಲ್ಲವೋ ಅವರುಗಳು ಇದೇ ತಿಳುವಳಿಕೆ ಪತ್ರ ಎಂದು ಭಾವಿಸಿ ಸಭೆಗೆ ಆಗಮಿಸಲು ಕೋರಲಾಗಿದೆ.

**ವಿಶೇಷ ಸೂಚನೆಗಳು:-**

1. ಸಭೆಯಲ್ಲಿ ಚರ್ಚೆಗೆ ತರಬಹುದಾದ ವಿಷಯಗಳನ್ನು ಸದಸ್ಯರು ಲಿಖಿತ ರೂಪದಲ್ಲಿ ದಿನಾಂಕ:12-09-2022 ನೇ ಸೋಮವಾರ ಮಧ್ಯಾಹ್ನ 1 ಗಂಟೆಯೊಳಗೆ ಸಂಘಕ್ಕೆ ತಲುಪುವಂತೆ ಕಳುಹಿಸತಕ್ಕದ್ದು.
2. ಸಭೆಗೆ ಆಗಮಿಸುವಾಗ ಈ ನೋಟಿಸ್ ಪುಸ್ತಕವನ್ನು ತಪ್ಪದೇ ತರಬೇಕು.
3. ಪ್ರತಿ ವರ್ಷದ ಷೇರು ಲಾಭಾಂಶವನ್ನು ಘೋಷಣೆ ಮಾಡಲಾದ ದಿನಾಂಕದಿಂದ 3 ವರ್ಷದೊಳಗೆ ಪಡೆಯತಕ್ಕದ್ದು. ತಪ್ಪಿದ್ದಲ್ಲಿ ಸಂಘದ ಬೈಲಾ ರೀತ್ಯ ಕಾಯ್ದಿಟ್ಟ ನಿಧಿಗೆ ವರ್ಗಾಯಿಸಲಾಗುವುದು.
4. ಸದಸ್ಯರ ವಿಳಾಸ ಬದಲಾಗಿದ್ದಲ್ಲಿ ಬದಲಾದ ವಿಳಾಸವನ್ನು ಕಛೇರಿಯಲ್ಲಿ ತಿಳಿಸಿ ನೋಂದಾಯಿಸಿಕೊಳ್ಳತಕ್ಕದ್ದು.
5. ಪ್ರತಿಯೊಬ್ಬ ಸದಸ್ಯರು ತಿದ್ದುಪಡಿ ಕಾಯ್ದೆ ಅನ್ವಯ ನಿರ್ದೇಶಕ ಮಂಡಳಿ ನಿಗದಿಪಡಿಸಿದ ಕನಿಷ್ಟ ಮೊಬಲಗಿನ ವ್ಯವಹಾರವನ್ನು ಈ ಹಿಂದಿನ 5 ಸಹಕಾರಿ ವರ್ಷಗಳ ಪೈಕಿ ಯಾವುದೇ ಎರಡು ವರ್ಷಗಳ ಕನಿಷ್ಠ ಸೇವೆ ಅಥವಾ ಸೌಲಭ್ಯವನ್ನು ಪಡೆದಿರತಕ್ಕದ್ದು.
6. ಎ ತರಗತಿಯ ಎಲ್ಲಾ ಸದಸ್ಯರು ಷೇರು ಧನವನ್ನು ಕನಿಷ್ಠ ರೂ 3000/- ಕ್ಕೆ ದಿನಾಂಕ 30.9.2022 ರೊಳಗೆ ಭರ್ತಿ ಮಾಡಿಕೊಳ್ಳುವುದು. ಇಲ್ಲದಿದ್ದರೆ ಸದಸ್ಯತ್ವ ರದ್ದುಗೊಳ್ಳುವುದು.
7. ಹಿಂದಿನ 5 ವಾರ್ಷಿಕ ಮಹಾಸಭೆಗಳ ಪೈಕಿ ಕನಿಷ್ಟ 2 ವರ್ಷಗಳ ಮಹಾಸಭೆಗಳಿಗೆ ಹಾಜರಾಗುವುದು ಕಡ್ಡಾಯವಾಗಿರುತ್ತದೆ.
8. ಸಂಘದ ಸದಸ್ಯರ ಮಕ್ಕಳು 2021-22 ನೇ ಶೈಕ್ಷಣಿಕ ವರ್ಷದಲ್ಲಿ ಎಸ್.ಎಸ್.ಎಲ್.ಸಿ. ಪಿ.ಯು.ಸಿ, ಅಂತಿಮ ಡಿಗ್ರಿ ತರಗತಿಗಳಲ್ಲಿ, ಸ್ನಾತಕೋತ್ತರ ತರಗತಿಯಲ್ಲಿ ಹಾಗೂ ವೃತ್ತಿಪರ ತರಗತಿಗಳ ಅಂತಿಮ ವರ್ಷದ ತರಗತಿಗಳಲ್ಲಿ ಅತಿ ಹೆಚ್ಚು ಅಂಕ ಗಳಿಸಿದ್ದರೆ ಅಂತಹ ಮಕ್ಕಳ ದೃಢೀಕೃತ ಅಂಕಪಟ್ಟಿಯನ್ನು ದಿನಾಂಕ:12-09-2022 ರೊಳಗೆ ಕಛೇರಿಗೆ ತಲುಪಿಸಬೇಕು. ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಮಹಾಸಭೆಯಲ್ಲಿ ಪುರಸ್ಕರಿಸಲಾಗುವುದು.

| ಸಹಿ/- ಕುಮಾರ್ | ಸಹಿ/- ವೀರೇಶಪ್ಪ.ಹೆಚ್ | ಸಹಿ/- ಡಾ||.ಹೆಚ್.ಪಿ.ರಾಜ್ ಕುಮಾರ್ |
|---|---|---|
| ಮುಖ್ಯಕಾರ್ಯನಿರ್ವಹಣಾಧಿಕಾರಿ | ಉಪಾಧ್ಯಕ್ಷರು | ಅಧ್ಯಕ್ಷರು |


J H ಪಟೇಲ್ ಬಡಾವಣೆಯಲ್ಲಿ, ಶಿವ-ಪಾರ್ವತಿ ಬಡಾವಣೆಯಲ್ಲಿ 50x80 North, 60x84 East, 30x84 East, 35x75 North, 40x60 North. 40 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆ ಬಾಡಿಗೆಗೆ**
ಹರಿಹರ ದೇವಾಲಯದ ಆವರಣದಲ್ಲಿ 1ಬೆಡ್ ರೂಂ ಮನೆ ಬಾಡಿಗೆಗೆ, ಸಸ್ಯಹಾರಿಗಳಿಗೆ ಮಾತ್ರ, ರೂ. 5000/- ಬಾಡಿಗೆ, ಅಡ್ವಾನ್ಸ್ : ರೂ. 25,000, 24 ಗಂಟೆಗಳ ನೀರು, ಪ್ರಶಾಂತ ವಾತಾವರಣವಿದೆ.
94814 56017, 94819 01103
ಗಿರಿಜಾ ಹೆಗಡೆ

**ಮನೆ ಲೀಜ್‌ಗೆ ಇದೆ**
ಕುಂದುವಾಡ ರೋಡ್ ಜೈನ್ ಲೇಔಟ್, 2ನೇ ಮೇನ್, 2ನೇ ಕ್ರಾಸ್, DR/1885/81 ರಲ್ಲಿ ಬರುವ ಪೂರ್ವ ಫೇಸ್, 3ನೇ ಫ್ಲೋರ್‌ನಲ್ಲಿ ಸಿಂಗಲ್ ಬೆಡ್ ರೂಂ ಮನೆ ಲೀಜ್‌ಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ.
97392 04631, 88673 58631

**ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ ಬೇಕಾಗಿದೆ**
ಎಸ್.ಎಸ್ ಲೇಔಟ್, ಬಸವೇಶ್ವರ ಬಡಾವಣೆ
63610 59489

**ಬೇಕಾಗಿದ್ದಾರೆ**
ಸನ್ನಿಧಿ ಟ್ರೇಡಿಂಗ್ ಕೋ ಚಿತ್ರದುರ್ಗ ಮತ್ತು ದಾವಣಗೆರೆ ವಿಭಾಗಕ್ಕೆ ಬೇಕಾಗಿದ್ದಾರೆ.
* ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ಸ್ ಮ್ಯಾನೇಜರ್ಸ್
* ಡಾಟಾ ಎಂಟ್ರಿ ಎಕ್ಸಿಕ್ಯೂಟಿವ್ಸ್
* ಟೆಲಿಕಾಲಿಂಗ್ ಎಕ್ಸಿಕ್ಯೂಟಿವ್ಸ್.
76767 62286, 76767 62216

ಗೌರಿ ಗಣೇಶ ಹಬ್ಬದ ಶುಭಾಶಯಗಳು
**ಕಮರ್ಷಿಯಲ್ ಸೈಟು ಮಾರಾಟಕ್ಕಿದೆ**
ದಾವಣಗೆರೆಯ ಬನಶಂಕರಿ ಬಡಾವಣೆಯಲ್ಲಿ ಸಣ್ಣ ಅಳತೆಯ ಕಮರ್ಷಿಯಲ್ ಕಾರ್ನರ್ ಸೈಟ್ (ಒಟ್ಟು 1278 ಅಡಿಗಳು) ಮಾರಾಟಕ್ಕಿದೆ. ಸಂಪರ್ಕಿಸಿ
Mob: 9742434049

**Change Of Name**
I AJMAL KHAN resident at 1808 3rd Main, 1st Cross, vinobhanagar, Davanagere. I have changed my name as AJMAL KHAN B before notary Davanagere on 30.8.2022. In Future all my records and transactions will be in my new name as undersigned - AJMAL KHAN B

**WANTED**
Marketing Executives-5, Scheme Collectors - 5 Nos., Freshers & experienced candidates can apply. 2 wheeler with a valid driving licence, good communication, excellent personality Male / Female candidates can apply.
hr@sultangold.com
call 80500 62916

**ಸೈಟು ಮಾರಾಟಕ್ಕಿದೆ**
40x45 ಕುಂದುವಾಡ ಕೆರೆ (ಹೋಟೆಲ್ ಕವಿ ಮನೆ ಹತ್ತಿರ) (ಮಧ್ಯವರ್ತಿಗಳಿಗೆ ಅವಕಾಶವಿಲ್ಲ) ಸಂಪರ್ಕಿಸಿ:
94484 43130

**ಮನೆ ಬಾಡಿಗೆಗೆ ಇದೆ**
# 641/15, ಉತ್ತಮ ಲೇಔಟ್, ಆವರಗೆರೆ, ದಾವಣಗೆರೆ ಮೊದಲನೇ ಮಹಡಿ ಹಾಗೂ ಎರಡನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಎಲ್ಲಾ ಸೌಕರ್ಯವಿದೆ.
99644 90568, 70196 32334

**ಜಮೀನು ಮಾರಾಟಕ್ಕಿದೆ**
1.1/4 ಎಕರೆ ಜಮೀನು ಮಾರಾಟಕ್ಕಿದೆ. Rs-1 Crore (Total), 5 S E Corner. 9 km From Shamanur, 3 Km From NH-4 (ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
SGK Realtors
63608 66997

**ಅಡಿಕೆ ಬೇಯಿಸಲು ಶೆಡ್ ಬಾಡಿಗೆಗೆ**
ಚನ್ನಗಿರಿ ರಸ್ತೆಯಲ್ಲಿರುವ ಮತ್ತಿ ರೈಸ್‌ಮಿಲ್ ಆವರಣದಲ್ಲಿ ಶೆಡ್ ಇದ್ದು, ಅಡಿಕೆ ಬೇಯಿಸಿ, ಒಣಗಿಸಲು ಯೋಗ್ಯವಾಗಿದೆ. ಈ ಶೆಡ್ ಬಾಡಿಗೆ ಆಧಾರದಲ್ಲಿ ಕೊಡಲಾಗುವುದು. ತೆಂಗಿನ ಸಸಿಗಳು ಸಿಗುತ್ತವೆ.
99451 59582

**ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ**
KSS SOLUTION CSC
ಸಂಬಳ: 4000 To 6000. ವಯೋಮಿತಿ: 20-25 ವರ್ಷದ ಮಹಿಳೆಯರು ಬೇಕಾಗಿದ್ದಾರೆ. ಎಸ್‌ಎಸ್ ಲೇಔಟ್ 'ಬಿ' ಬ್ಲಾಕ್, ದಾವಣಗೆರೆ
72045 42910
(Time:10am to 6pm)

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637

**HOUSE FOR RENT/LEASE**
2 BHK Door No: 344, J.H Patel Nagar, 'A' Block 8th Main, Near Podar International School Dvg. Contact:
88617 11072

**FOR LEASE**
30X40 2 BHK 1st Floor for lease, Door No: 2368/1 Pump House Road, Jeevan Bheema Nagar TV Station Lake Backside. Contact:
94826 68578, 94837 72698

ಗೌರಿ ಗಣೇಶ ಹಬ್ಬದ ಶುಭಾಶಯಗಳು
**Commercial Site for Sale**
B. I. E. T. Road, Corner Site, opposite Hemavathi Hostel, total measurement 3200/sq. Feets.
contact no.
97424 34049

**ಬಂಗ್ಲೆ ಸೈಟ್ ಮಾರಾಟಕ್ಕಿದೆ**
ಶಿವಗಂಗಾ ಚೌಟ್ರಿ ಹಿಂಭಾಗ ಅಮರನಾಥ ಲೇಔಟ್‌ನಲ್ಲಿ 40 ಅಡಿ ರಸ್ತೆಗೆ ಲೇಕ್ ವೀವ್ಯೂ, ಕುಂದುವಾಡ ಕೆರೆಗೆ ಹತ್ತಿರ 62x80
98440 84229
63638 70470

**WANTED**
1. Recepionist
2. Staff Nurses
3. Lab Technician
SHILPA DIAGNOSTICS
MCC B Block Near Swimming Pool, Davangere.
98440 65638

**ಸೈಟ್ ಮಾರಾಟಕ್ಕಿದೆ**
30x40 ಪೂರ್ವ Good Location, M.N.K ಮಹಾಲಕ್ಷ್ಮಿ ಬಡಾವಣೆ ಉತ್ತಮ್ ಬಡಾವಣೆ ಪಕ್ಕ ಆವರಗೆರೆ ದಾವಣಗೆರೆ
98452 95326

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
ದಾವಣಗೆರೆಯ ಪ್ರಸಿದ್ಧ ಫರ್ನಿಚರ್ ಶೋರೂಂನಲ್ಲಿ ಕೆಲಸ ಮಾಡಲು ಟ್ಯಾಲಿ ಅನುಭವವಿರುವ ಅಕೌಂಟೆಂಟ್ ಮತ್ತು ಸೇಲ್ಸ್‌ನಲ್ಲಿ ಅನುಭವವಿರುವ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಸಂಪರ್ಕಿಸಿ : ಕಬ್ಬೂರ್ ಫರ್ನಿಚರ್
ಪಿ.ಬಿ ರಸ್ತೆ, ಸುಲ್ತಾನ್ ಡೈಮಂಡ್ ಪಕ್ಕ, ದಾವಣಗೆರೆ.
ಮೊ : 98444 26300

**ಮನೆ ಭೋಗ್ಯಕ್ಕೆ**
ಶ್ರೀ ಶಂಕರ ವಿಹಾರ ಬಡಾವಣೆ ಹೊಸ ಮನೆ, 1ನೇ ಮಹಡಿ & 2ನೇ ಮಹಡಿಯಲ್ಲಿ. 2 ಬೆಡ್ ರೂಂ ಮನೆ ಭೋಗ್ಯಕ್ಕೆ ಇದೆ. (ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
94489 39582

**CHANGE OF NAME**
PUSHPA LINGARAJU ALSO KNOWN AS USHA LINGARAJU (old name) W/o LINGARAJ GOWDARU MAHESH Resident of # J DIVISION, 1st main, 1st cross, Behind Railway Station, Patel Extension, Keshava Nagar, Harihar-577 601, Davangere Dist. Karnataka has changed my name as PUSHPA LINGARAJ PATEL vide affidavit dated 30.09.2022 sworn before Notary I.P Brahmakumar, Davangere, Henceforth all my transactions and dealings will be in my new name PUSHPA LINGARAJ PATEL.
Sd/- PUSHPA LINGARAJ PATEL

**WORK FROM HOME**
MBA Mktg, BE,cs/ BSc,cs Freshers Required Very Good Communication Skills Salary: 10,000/- PM Send Resume To
82172 11456

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್
ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಬೇಕಾಗಿದ್ದಾರೆ**
ಸೂಪರ್ ಮಾರ್ಕೆಟ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಫೋನ್ ಮಾಡಬೇಡಿ, ನಿಮ್ಮ ಹೆಸರು ಮತ್ತು ಊರು ಅಥವಾ ಏರಿಯಾ ಮೆಸೇಜ್ ಮಾಡಿ, ನಾವೇ ಫೋನ್ ಮಾಡುತ್ತೇವೆ.
ಸಜ್ಜನ್ ಸೂಪರ್ ಮಾರ್ಕೆಟ್
ಹೆಚ್.ಕೆ.ಆರ್. ಸರ್ಕಲ್, ನಿಟುವಳ್ಳಿ, ದಾವಣಗೆರೆ. 99009 71888

# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಬುಧವಾರ, ಆಗಸ್ಟ್ 31, 2022






# ದೇವನಗರಿಯಲ್ಲಿ ವಿನಾಯಕ ಚೌತಿ ಸಂಭ್ರಮ

ದಾವಣಗೆರೆ, ಆ. 30- ಸಿದ್ಧಿ ವಿನಾಯಕನನ್ನು ಸಂಭ್ರಮದಿಂದ ಬರಮಾಡಿಕೊಳ್ಳಲು ಜನತೆ ಕಾತರದಿಂದ ಕಾದಿದ್ದಾರೆ. ಮನೆಗಳಲ್ಲಿ ಸಂಭ್ರಮ ಮನೆ ಮಾಡಿದೆ. ಬೀಗರು-ಬಿಜ್ಜರನ್ನು ಕರೆದಿದ್ದಾಗಿದೆ. ಆಗಮನವೊಂದೇ ಬಾಕಿ.

ಮನೆಗಳಲ್ಲಿ ಗಣೇಶನಿಗಾಗಿ ಮಂಟಪಗಳು ಸುಂದರವಾಗಿ ಸಿದ್ಧಗೊಳ್ಳುತ್ತಿವೆ. ಮನೆಗಳೂ ಸಹ ಸಿಂಗಾರಗೊಳ್ಳುತ್ತಿವೆ. ಚಿಕ್ಕಮಕ್ಕಳಲ್ಲಂತೂ ಸಂಭ್ರಮ ಗರಿಗೆದರಿದೆ. ಗಣೇಶನಿಗೆ ಇಷ್ಟವಾದ ಮೋದಕ ಸೇರಿದಂತೆ, ವಿವಿಧ ಬಗೆಯ ಭಕ್ಷ್ಯಗಳು ತಯಾರಾಗಿವೆ. ಇನ್ನೇನು ವಕ್ರತುಂಡ ಆಗಮಿಸಿ ಆಸೀನನಾಗಬೇಕಷ್ಟೆ.

ಕಳೆದ ಎರಡು ವರ್ಷಗಳಿಂದ ಕೊರೊನಾ ಕಾರಣಕ್ಕಾಗಿ ಹಬ್ಬ ಕಳೆಗುಂದಿತ್ತು. ಆದರೆ ಈ ಬಾರಿ ಅಗತ್ಯ ವಸ್ತುಗಳ ಬೆಲೆ ಏರಿಕೆಯ ನಡುವೆಯೂ ಜನತೆ ಸಂಭ್ರಮದಿಂದ ಹಬ್ಬದಾಚರಣೆಗೆ ಸಿದ್ಧರಾಗಿದ್ದಾರೆ.

ಸಂಘ-ಸಂಸ್ಥೆಗಳೂ ಸಹ ಗಣೇಶೋತ್ಸವಕ್ಕೆ ನಾ ಮುಂದು-ತಾ ಮುಂದು ಎಂದು ಹಲವಾರು ದಿನಗಳಿಂತ ತಯಾರಿ ನಡೆಸುತ್ತಿದ್ದು, ಮಂಗಳವಾರ ತಡರಾತ್ರಿ ವರೆಗೂ ಕೊನೆಯ ತಯಾರಿ ನಡೆಯುತ್ತಲೇ ಇತ್ತು. ಇತ್ತ ಚಿಕ್ಕ ಮಕ್ಕಳು, ಯುವಕರೂ ಸಹ ತಮ್ಮ ಓಣಿಗಳಲ್ಲಿ ಗಣೇಶನ ಪ್ರತಿಷ್ಠಾಪನೆಗೆ ಮುಂದಾಗಿದ್ದಾರೆ. ಮನೆಗಳಲ್ಲಿ ಹಾಗೂ ಬೀದಿಗಳಲ್ಲಿ 'ಪಟ್ಟಿ' ಎತ್ತುವ ಕಾರ್ಯ ಭರದಿಂದಲೇ ನಡೆದಿತ್ತು.

ಇನ್ನು ಹಬ್ಬದ ಅಂಗವಾಗಿ ಗ್ರಾಹಕರಿಂದ ತುಂಬಿರಬೇಕಾದ ಮಾರುಕಟ್ಟೆ ಮಾತ್ರ ಮಂಗಳವಾರ ಮಧ್ಯಾಹ್ನದವರೆಗೂ ಶಾಂತವಾಗಿತ್ತು. ವ್ಯಾಪಾರಿಗಳ ಮುಖ ಕಳೆಗುಂದಿತ್ತು. ಆದರೆ ಸಂಜೆಯಾಗುತ್ತಲೇ ವ್ಯಾಪಾರ ಚುರುಕಾಯಿತು. ಗಣೇಶನ ವಿಗ್ರಹಗಳ ಸಂಖ್ಯೆ ಕಡಿಮೆ ಇತ್ತು. ಬೇಡಿಕೆ ಹೆಚ್ಚಾಗಿದ್ದರಿಂದ ದರವೂ ಹೆಚ್ಚಾಗಿತ್ತು. ಪಿಒಪಿ ಗಣಪತಿ ಮೂರ್ತಿಗಳಿಗೆ ನಿಷೇಧವಿದ್ದುದರಿಂದ ಮಣ್ಣಿನ ಮೂರ್ತಿಗಳೇ ಮಾರುಕಟ್ಟೆಯಲ್ಲಿ ಹೆಚ್ಚಾಗಿದ್ದವು. ಹೊರ ಜಿಲ್ಲೆ ಹಾಗೂ ರಾಜ್ಯಗಳಿಂದಲೂ ಮೂರ್ತಿ ತಂದು ಮಾರಾಟ ಮಾಡಲಾಗುತ್ತಿತ್ತು. ಚಿಕ್ಕ ಮೂರ್ತಿಗೆ 500 ರೂ. ನಂತರ ಗಾತ್ರ, ಆಕೃತಿ, ಚಂದಕ್ಕೆ ತಕ್ಕಂತೆ ಬೆಲೆ ಹೆಚ್ಚಾಗುತ್ತಿತ್ತು. ಕೊಡು-ಕೊಳ್ಳುವವರ ನಡುವೆ ಚೌಕಾಸಿ ನಡೆಯುತ್ತಲೇ ಇತ್ತು.

ಜಯದೇವ ವೃತ್ತ, ಪಿ.ಬಿ. ರಸ್ತೆ, ಹೈಸ್ಕೂಲ್ ಮೈದಾನ, ನಿಟುವಳ್ಳಿ ದುರ್ಗಾಂಬಿಕಾ ದೇವಸ್ಥಾನದ ವೃತ್ತ, ವಿದ್ಯಾರ್ಥಿಭವನ ಸೇರಿದಂತೆ ಹಲವು ಮುಖ್ಯ ರಸ್ತೆ ಹಾಗೂ ವೃತ್ತಗಳಲ್ಲಿ ಹಳ್ಳಿಗರು ಮಾವಿನ ಸೊಪ್ಪು, ಬಾಳೆದಿಂಡು ತಂದು ಮಾರಾಟ ಮಾಡುತ್ತಿದ್ದರು. ಸೇವಂತಿಗೆ, ಚಂಡು ಹೂಗೆ ಬೇಡಿಕೆ ಹೆಚ್ಚಾಗಿತ್ತು. 50 ರಿಂದ 60 ರೂ.ಗಳ ವರೆಗೆ ಮಾರೊಂದಕ್ಕೆ ಮಾರಾಟವಾಗುತ್ತಿತ್ತು.

ಇನ್ನೂ ಅಲಂಕಾರಿಕ ವಸ್ತುಗಳ ಖರೀದಿಯೂ ಜೋರಾಗಿತ್ತು. ಮನೆ, ಗಲ್ಲಿಯಲ್ಲಿ ಇಡುವ ಗಣೇಶ ಸಮಿತಿಗಳು ಅಲಂಕಾರಿಗಳ ವಸ್ತುಗಳನ್ನು ಖರೀದಿ ಮಾಡುತ್ತಿದ್ದರು.

**ಸಿರಿಗೆರೆ ಮಂಟಪ:** ಹಿಂದೂ ಮಹಾಗಣಪತಿ ಸಮಿತಿಯಿಂದ ಸರ್ಕಾರಿ ಬಾಲಕರ ಪ್ರೌಢಶಾಲಾ ಮೈದಾನದಲ್ಲಿ ತರಳಬಾಳು ಹುಣ್ಣಿಮೆ ಮಂಟಪದ ಮಾದರಿಯ ಪೆಂಡಾಲ್ ನಿರ್ಮಾಣವಾಗಿದೆ. 25 ದಿನಗಳ ಕಾಲ ಗಣೇಶನ ಪ್ರತಿಷ್ಠಾಪನೆ ಇರಲಿದೆ. ಕಿರುತೆರೆ ಕಲಾವಿದರಿಂದ ಮನರಂಜನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಆಗಸ್ಟ್ 31ರ ಸಂಜೆ 6.30 ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಶ್ರೀ ತರಳಬಾಳು **(7ನೇ ಪುಟಕ್ಕೆ)**

### ಪರಿಸರ ಸ್ನೇಹಿ ವಿಗ್ರಹಗಳಿಗೆ ಬೇಡಿಕೆ

**ವರ್ಷದಿಂದ ವರ್ಷಕ್ಕೆ ಪರಿಸರ ಸ್ನೇಹಿ ವಿನಾಯಕನ ವಿಗ್ರಹಗಳಿಗೆ ಬೇಡಿಕೆ ಹೆಚ್ಚಾಗುತ್ತಲೇ ಇದೆ. ರಾಸಾಯನಿಕ ಬಣ್ಣದಿಂದಾಗುವ ಅನಾಹುತಗಳಿಂದ ಜಾಗೃತರಾಗುತ್ತಿರುವ ಜನತೆ ಬಣ್ಣ ಲೇಪಿಸದ ವಿಗ್ರಹಗಳನ್ನು ಬಯಸುತ್ತಿದ್ದಾರೆ.**

**ಆದಾಗ್ಯೂ ಬಹುಪಾಲು ಜನರು ಬಣ್ಣದ ವಿಗ್ರಹಗಳನ್ನೇ ಕೊಳ್ಳುವುದರಿಂದ ಮೂರ್ತಿ ತಯಾರಕರು ಶೇ.10ರಷ್ಟು ಮಾತ್ರ ಪರಿಸರ ಸ್ನೇಹಿ ವಿಗ್ರಹಗಳನ್ನು ಮಾರಾಟಕ್ಕಿಡುತ್ತಾರೆ. ಈ ವರ್ಷ 'ಪರಿಸರ ಸ್ನೇಹಿ'ಗೆ ಮತ್ತಷ್ಟು ಬೇಡಿಕೆ ಬಂದಿದ್ದರಿಂದ ವಿಗ್ರಹಗಳ ಕೊರತೆ ಉಂಟಾಗಿತ್ತು. ಕೆಲವರು ಅನಿವಾರ್ಯವಾಗಿ ಬಣ್ಣದ ವಿಗ್ರಹಗಳನ್ನೇ ಕೊಳ್ಳಬೇಕಾಯಿತು.**

**ಬಣ್ಣ ರಹಿತ ಮಣ್ಣಿನ ಕಪ್ಪು ಬಣ್ಣದ ವಿಗ್ರಹಕ್ಕೆ ಒಂದಿಷ್ಟು ಅಂದ ಕೊಡುವ ನಿಟ್ಟಿನಲ್ಲಿ ಪರಿಸರ ಸ್ನೇಹಿ ಕೆಂಪು ಹಾಗೂ ಹಳದಿ ಬಣ್ಣದ ವಿಗ್ರಹಗಳೂ ಹೆಚ್ಚಾಗತೊಡಗಿವೆ.**





ಹೈಸ್ಕೂಲ್ ಮೈದಾನದಲ್ಲಿನ ಮಂಟಪ

# ಎಸ್‌ಟಿ ಮೀಸಲಾತಿ ಹೆಚ್ಚಳಕ್ಕೆ ತೀರ್ಮಾನ

### ಶೇ.7.5ಕ್ಕೆ ಮೀಸಲಾತಿ ಹೆಚ್ಚಿಸಲು ಸಚಿವ ಶ್ರೀರಾಮುಲು ಇಂಗಿತ

ಬೆಂಗಳೂರು, ಆ. 30 - ರಾಜ್ಯ ವಿಧಾನಸಭಾ ಚುನಾವಣೆ ಸಮೀಪವಾಗುತ್ತಿದ್ದಂತೆ, ವಾಲ್ಮೀಕಿ ಸಮುದಾಯದ ಎಸ್‌ಟಿ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸುವ ತೀರ್ಮಾನಕ್ಕೆ ರಾಜ್ಯ ಸರ್ಕಾರ ಬಂದಿದೆ.

50ಕ್ಕೂ ಹೆಚ್ಚು ವಿಧಾನಸಭಾ ಕ್ಷೇತ್ರಗಳಲ್ಲಿ ನಿರ್ಣಾಯಕ ಪಾತ್ರ ವಹಿಸುವ ಈ ಸಮುದಾಯವನ್ನು ಓಲೈಯಿಸಿಕೊಳ್ಳಲು ಬೊಮ್ಮಾಯಿ ನೇತೃತ್ವದ ಸರ್ಕಾರ ಅವರಿಗಿರುವ ಶೇ. 3 ರಷ್ಟು ಮೀಸಲಾತಿಯನ್ನು ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚಿಸಲು ನಿರ್ಧರಿಸಿದ್ದಾರೆ.

ತಮಗೆ ನಿಗದಿ ಪಡಿಸಿರುವ ಮೀಸಲಾತಿ ಪ್ರಮಾಣವನ್ನು ಶೇ. 3 ರಿಂದ 7.5ಕ್ಕೆ ಹೆಚ್ಚಿಸುವಂತೆ ಆ ಸಮುದಾಯದ ಗುರುಗಳು, ಜನಪ್ರತಿನಿಧಿಗಳು, ಸಂಘ ಸಂಸ್ಥೆಗಳು, ಕಳೆದ ಕೆಲವು ದಿನಗಳಿಂದ ಹೋರಾಟ ಮಾಡುತ್ತಾ ಬಂದಿವೆ.

ಸರ್ಕಾರ ಕೈಗೊಳ್ಳುತ್ತಿರುವ ಈ ನಿರ್ಧಾರವನ್ನು ಸಾರಿಗೆ ಸಚಿವ ಬಿ. ಶ್ರೀರಾಮುಲು ಇಂದಿಲ್ಲಿ ವ್ಯಕ್ತಪಡಿಸಿದ್ದು, ವಾಲ್ಮೀಕಿ ಸಮುದಾಯಕ್ಕೆ ಅತಿ ಶೀಘ್ರದಲ್ಲೇ ರಾಜ್ಯ ಸರ್ಕಾರ ಸಿಹಿ ಸುದ್ದಿಯನ್ನು ನೀಡಲಿದೆ ಎಂದಿದ್ದಾರೆ.

ಈ ಕುರಿತು ಸರಣಿ ಟ್ವೀಟ್ ಮಾಡಿರುವ ರಾಮುಲು ಅವರು, ಮೀಸಲಾತಿ ಸಂಬಂಧ ನಾಗಮೋಹನ್ ದಾಸ್ ವರದಿ ನೀಡಿದ್ದಾರೆ. ಸುಭಾಷ್ ಆಡಿಯ ನೇತೃತ್ವದ ತ್ರಿಸದಸ್ಯ ಸಮಿತಿಯು ನೀಡಿರುವ ವರದಿ ಸರ್ಕಾರದ ಪರಿಶೀಲನಾ ಹಂತದಲ್ಲಿದೆ.

ಅದಷ್ಟು ಶೀಘ್ರ ನಮ್ಮ ಸಮುದಾಯಕ್ಕೆ ಸಿಹಿ ಸುದ್ದಿಯನ್ನು ನಮ್ಮ ಸರ್ಕಾರವೇ ಕೊಡಲಿದೆ ಎಂದವರು ಹೇಳಿದರು.

ಈ ಬಗ್ಗೆ ಯಾರಿಗೂ ಸಂಶಯವೇ ಬೇಡ. ಮೀಸಲಾತಿ ಸಂಬಂಧ ನಾನು ಹೇಳಿರುವ ಮಾತಿನಿಂದ ಒಂದು ಇಂಚು ಹಿಂದೆ ಸರಿಯಲ್ಲ. ಈಗಲೂ ಅದಕ್ಕೆ ಬದ್ಧನಾಗಿದ್ದೇನೆ ಎಂದು ತಾವು ವಾಲ್ಮೀಕಿ ಸಮುದಾಯಕ್ಕೆ ನೀಡಿದ್ದ ಭರವಸೆಯನ್ನು ನೆನಪಿಸಿದ್ದಾರೆ.

ಪರಿಶಿಷ್ಟ ಪಂಗಡದ ಜನಾಂಗದವರಿಗೆ ಮೀಸಲಾತಿ ಪ್ರಮಾಣವನ್ನು 3% ರಿಂದ 7.5% ಹೆಚ್ಚಿಸುವ ಸಂಬಂಧ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ವರದಿಯನ್ನು ಜಾರಿಗೊಳಿಸುಂತೆ ಮುಖ್ಯಮಂತ್ರಿಗಳಾದ ಬಸವರಾಜ್ ಬೊಮ್ಮಾಯಿ ಅವರಿಗೆ ಮನವಿ ಮಾಡಿಕೊಳ್ಳಲಾಗಿದೆ. ಅವರಿಂದಲೂ ಸಕಾರಾತ್ಮಕ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದು ಹೇಳಿದ್ದಾರೆ.

# ಎರಡು ದಿನಗಳ ಮಳೆಯಿಂದ 2 ಸಾವಿರ ಕೋಟಿ ರೂ. ನಷ್ಟ

ಬೆಂಗಳೂರು, ಆ. 30 - ಕಳೆದ ಎರಡು ದಿನಗಳಿಂದ ರಾಜ್ಯದಲ್ಲಿ ಬೀಳುತ್ತಿರುವ ಭಾರೀ ಮಳೆಯಿಂದ ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿದೆ ಎಂದು ಕಂದಾಯ ಸಚಿವ ಆರ್. ಅಶೋಕ್ ತಿಳಿಸಿದ್ದಾರೆ.

ಸರ್ಕಾರಕ್ಕೆ ಬಂದಿರುವ ಪ್ರಾಥಮಿಕ ವರದಿಯಲ್ಲಿ ರಾಮನಗರ, ಮಂಡ್ಯ, ಚಾಮರಾಜನಗರ ಹಾಗೂ ಮೈಸೂರಿನ ಕೆಲವು ಭಾಗಗಳಲ್ಲಿ ನಿನ್ನೆ ಒಂದೇ ದಿನ ಎರಡು ಸಾವಿರ ಕೋಟಿ ರೂ.ನಷ್ಟು ಬೆಳೆ ಮತ್ತು ಸಾರ್ವಜನಿಕ ಆಸ್ತಿಪಾಸ್ತಿ ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ ಎಂದವರು ಹೇಳಿದ್ದಾರೆ. ಕಳೆದ ಎರಡು ದಿನಗಳಿಂದ 20 ಜಿಲ್ಲೆಗಳಲ್ಲಿ ಬಿದ್ದಿರುವ ಮಳೆಯಿಂದ ದೊಡ್ಡ ಪ್ರಮಾಣದಲ್ಲಿ ರೈತರ ಬೆಳೆ ನಾಶವಾಗಿದೆ. ಮಳೆ ನಿಂತ ಕೂಡಲೇ ನಮ್ಮ ಅಧಿಕಾರಿಗಳು ಸ್ಥಳ ಪರಿಶೀಲಿಸಿ, ಸರ್ಕಾರಕ್ಕೆ ವರದಿ ನೀಡಲಿದ್ದಾರೆ.

ಈ ಮಳೆಯಿಂದ 184 ಮನೆಗಳು ಕುಸಿದಿದ್ದು, 258 ಜಾನುವಾರುಗಳು ಮೃತಪಟ್ಟಿದ್ದರೆ, ಇಬ್ಬರು ಪ್ರಾಣ ತೆತ್ತಿದ್ದಾರೆ.

ರಾಜ್ಯದ 27 ಜಿಲ್ಲೆಗಳಲ್ಲಿ ವಾಡಿಕೆಗಿಂತ ಹೆಚ್ಚಿನ ಮಳೆ ಬಿದ್ದಿದೆ. ಅತಿವೃಷ್ಟಿ ಮತ್ತು ಪ್ರವಾಹದಿಂದ 7647 ಕೋಟಿ ರೂ. ಹಾನಿ ಸಂಭವಿಸಿದೆ.

ಒಂದೆರಡು ದಿನಗಳಲ್ಲೇ ಕೇಂದ್ರಕ್ಕೆ ಪ್ರಾಥಮಿಕ ವರದಿ ಸಲ್ಲಿಸಿ, **(7ನೇ ಪುಟಕ್ಕೆ)**

## ಮುರುಘಾ ಶರಣರ ಮೇಲೆ ಜಾತಿ ನಿಂದನಾ ಪ್ರಕರಣವೂ ಸೇರ್ಪಡೆ

### ಅಪ್ರಾಪ್ತೆಯರಿಂದ ಹೇಳಿಕೆ ದಾಖಲು

ಚಿತ್ರದುರ್ಗ, ಆ. 30- ಮುರುಘಾ ಮಠದ ಶ್ರೀ ಶಿವಮೂರ್ತಿ ಶರಣರ ವಿರುದ್ಧ ಪೋಕ್ಸೋ ಕಾಯ್ದೆಯಡಿ ದಾಖಲಾಗಿರುವ ಪ್ರಕರಣಕ್ಕೆ ಸಂಬಂಧಿ ಸಿದಂತೆ, ಇಬ್ಬರು ಅಪ್ರಾಪ್ತೆಯರು ನ್ಯಾಯಾಲಯದ ಎದುರು ಹೇಳಿಕೆ ದಾಖಲಿಸಿದ್ದಾರೆ.

ಚಿತ್ರದುರ್ಗದ 1ನೇ ಜೆ.ಎಂ.ಎಫ್.ಸಿ. ನ್ಯಾಯಾಲಯದ ಎದುರು ಸೆಕ್ಷನ್ 164 ಅಡಿಯಲ್ಲಿ ಅಪ್ರಾಪ್ತೆಯರು ಹೇಳಿಕೆ ದಾಖಲಿಸಿದ್ದಾರೆ.

ಈ ನಡುವೆ, ಶಿವಮೂರ್ತಿ ಶರಣರ ವಿರುದ್ಧ ಜಾತಿ ನಿಂದನಾ ಪ್ರಕರಣವನ್ನೂ ದಾಖಲಿಸಲಾಗಿದೆ. ಅಪ್ರಾಪ್ತೆ ಸಂತ್ರಸ್ತೆಯರಲ್ಲಿ ಒಬ್ಬರು ಪರಿಶಿಷ್ಟ ಜಾತಿಯವರು. ಈ ಹಿನ್ನೆಲೆಯಲ್ಲಿ ನ್ಯಾಯಾಲಯದ ಅನುಮತಿ ಪಡೆದು ಪರಿಶಿಷ್ಟರ ಮೇಲಿನ ದೌರ್ಜನ್ಯ ಪ್ರತಿಬಂಧಕ ತಡೆ ಕಾಯ್ದೆಯ ಅನ್ವಯ, ಪ್ರಕರಣದಲ್ಲಿ ಹೆಚ್ಚುವರಿ ಕಲಂ ಸೇರ್ಪಡೆ ಮಾಡಲಾಗಿದೆ.

## 1.55 ಲಕ್ಷ ಅಪಘಾತಗಳಲ್ಲಿ 69240 ದ್ವಿಚಕ್ರಸವಾರರ ಸಾವು

### ದ್ವಿಚಕ್ರ ವಾಹನ ಅಪಘಾತಗಳಿಂದ ಅತಿ ಹೆಚ್ಚು ಸಾವು

ನವದೆಹಲಿ, ಆ. 30 - ಕಳೆದ 2021ರಲ್ಲಿ ದೇಶಾದ್ಯಂತ ನಡೆದ ರಸ್ತೆ ಅಪಘಾತಗಳಲ್ಲಿ ದ್ವಿಚಕ್ರ ವಾಹನಗಳ ಸವಾರರು ಸಾವನ್ನಪ್ಪಿದ ಸಂಖ್ಯೆ ಅತಿ ಹೆಚ್ಚಿನ 70 ಸಾವಿರದಷ್ಟಿದೆ.

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ (ಎನ್.ಸಿ.ಆರ್.ಬಿ.) ವರದಿಗಳ ಪ್ರಕಾರ, 2021ರಲ್ಲಿ 1,55,622 ಜನರು ರಸ್ತೆ ಅಪಘಾತಗಳಿಂದ ಸಾವನ್ನಪ್ಪಿದ್ದಾರೆ. 2021ರಲ್ಲಿ ದ್ವಿಚಕ್ರ ವಾಹನಗಳಿಂದ ಅತಿ ಹೆಚ್ಚು ಅಪಘಾತ ಸಾವುಗಳು ಸಂಭವಿಸಿವೆ. 69,240 ಸಾವುಗಳು ಸಂಭವಿಸಿದ್ದು, ಇದು ರಸ್ತೆ ಅಪಘಾತದ ಸಾವುಗಳಲ್ಲಿ ಶೇ.44.5ರಷ್ಟಾಗಿದೆ.

ಕಾರುಗಳ ಅಪಘಾತದಲ್ಲಿ 23,531 (ಶೇ.51.1) ಹಾಗೂ ಲಾರಿಗಳ ಅಪಘಾತಗಳಲ್ಲಿ 14,622 (ಶೇ.94.) ಸಾವುಗಳು ಸಂಭವಿಸಿವೆ. ಎಸ್.ಯು.ವಿ., ಕಾರು ಹಾಗೂ ಜೀಪುಗಳ ಅಪಘಾತದಿಂದ 23,531 ಸಾವುಗಳು ಸಂಭವಿಸಿವೆ ಎಂದು ವರದಿಗಳು ಹೇಳಿವೆ.

ತಮಿಳುನಾಡಿನಲ್ಲಿ ರಸ್ತೆ ಅಪಘಾತದಿಂದ ಅತಿ ಹೆಚ್ಚಿನ 8,259 ಸಾವುಗಳು ಸಂಭವಿಸಿವೆ. ನಂತರದ ಸ್ಥಾನದಲ್ಲಿರುವ ಉತ್ತರ ಪ್ರದೇಶದಲ್ಲಿ 7,429 ಸಾವುಗಳು ಸಂಭವಿಸಿವೆ.

2021ರಲ್ಲಿ 4,03,116 ಅಪಘಾತಗಳು ಸಂಭವಿಸಿವೆ. ಅತಿ ಹೆಚ್ಚಿನ ರಸ್ತೆ ಅಪಘಾತಗಳು ಜನವರಿಯಲ್ಲಿ ಸಂಭವಿಸಿವೆ. ಈ ತಿಂಗಳಲ್ಲಿ 40,235 ಅಪಘಾತಗಳು ಸಂಭವಿಸಿವೆ. ಇದು ಒಟ್ಟು ಅಪಘಾತಗಳಲ್ಲಿ ಶೇ.10ರಷ್ಟಾಗಿದೆ.

## ಭಾರೀ ಮಳೆ : ಕೆರೆಗಳು ಭರ್ತಿ, ಸಾವಿರಾರು ಎಕರೆ ಜಮೀನು ಜಲಾವೃತ

**ಹರಪನಹಳ್ಳಿ**

ಹರಪನಹಳ್ಳಿ, ಆ.30- ನಿನ್ನೆ ರಾತ್ರಿ ಸುರಿದ ಭಾರೀ ಮಳೆಯಿಂದಾಗಿ ತಾಲ್ಲೂಕಿನ ವಿವಿಧ ಕಡೆಗಳಲ್ಲಿ ಕೆರೆಗಳು ಭರ್ತಿಯಾಗಿರುವ ಪರಿಣಾಮ ಸಾವಿರಾರು ಎಕರೆ ಜಮೀನುಗಳು ಜಲಾವೃತಗೊಂಡಿವೆ, ಅಲ್ಲಲ್ಲಿ ಮನೆಗಳು ಬಿದ್ದಿರುವ ಘಟನೆ ಜರುಗಿವೆ.

ತಾಲ್ಲೂಕಿನ ಕಂಚಿಕೇರಿ, ಅರಸೀಕೆರೆ, ಹಳ್ಳಿಕೇರಿ, ಸತ್ತೂರು, ಶಿಂಗ್ರಿಹಳ್ಳಿ, ಅಲಮರಸಿಕೇರಿ, ರಾಗಿಮಸಲವಾಡ, ಯಡಿಹಳ್ಳಿ, ಬೆಂಡಿಗೇರಿ, ಬಾಲೇನಹಳ್ಳಿ, ಯಲ್ಲಾಪುರ ಸೇರಿದಂತೆ ಕೆರೆಗಳು ತುಂಬಿ ಕೋಡಿ ಹರಿಯುತ್ತಿದ್ದವು, ಶಿಂಗ್ರಿಹಳ್ಳಿ ಗ್ರಾಮದ ಕೆರೆಕೋಡಿ ತುಂಬಿ ಹರಿದ ಪರಿಣಾಮ ಗ್ರಾಮದೊಳಗೆ ನೀರು ನುಗ್ಗಿ, ಶ್ರೀ ಆಂಜನೇಯ ದೇವಸ್ಥಾನ ಒಳಗೊಂಡು 30ಕ್ಕೂ ಹೆಚ್ಚು ಮನೆಗಳು ಜಲಾವೃತಗೊಂಡಿವೆ. ನೀರನ್ನು ಹೊರ ಹಾಕಲು ಗ್ರಾಮಸ್ಥರು ಹರ ಸಾಹಸಪಟ್ಟರು.

ಕಂಚಿಕೇರಿ ಹಾಗೂ ಹಳ್ಳಿಕೇರಿ, ಸತ್ತೂರು ಕೆರೆ ತುಂಬಿದ ಪರಿಣಾಮ, ಗ್ರಾಮಸ್ಥರು, ಯುವಕರು ಕೆರೆಯ ದಡದಲ್ಲಿ ಮೀನಿನ ಪರಿಕರಗಳೊಂದಿಗೆ, ಮೀನನ್ನು ಹಿಡಿಯಲು ಪೈಪೋಟಿ ನಡೆಸುತ್ತಿರುವುದು ಕಂಡು ಬಂತು. ಅತಿವೃಷ್ಟಿಯಿಂದಾಗಿ ಶಿಂಗ್ರಿಹಳ್ಳಿ, ಹಳ್ಳಿಕೇರಿ, ಕಂಚಿಕೇರಿ, ಅರಸಿಕೇರಿ ಭಾಗದ ಸಾವಿರಾರು ಎಕರೆಯ ರೈತರ ಮೆಕ್ಕೆಜೋಳ, ಅಡಿಕೆ, ಜೋಳ, ತರಕಾರಿ ಬೆಳೆದ ಫಸಲು ಜಲಾವೃತಗೊಂಡಿದೆ.

**ರಸ್ತೆ ಬಂದ್ :** ತಾಲ್ಲೂಕಿನ ಅರಸೀಕೇರಿ ಸಮೀಪದ ಹಳ್ಳವು ತುಂಬಿ ಹರಿಯುತ್ತಿರುವ ಪರಿಣಾಮ ಅರಸೀಕೆರೆಯಿಂದ ಉಚ್ಚಂಗಿದುರ್ಗದ ಕಡೆಯ ದಾವಣಗೆರೆಗೆ ಹೋಗಲು ರಸ್ತೆ ಸಂಚಾರ ಬಂದ್ ಆಗಿದೆ. ಈ ವೇಳೆ ಲಾರಿಯೊಂದು ದಾವಣಗೆರೆಗೆ ಹೋಗುತ್ತಿರುವಾಗ ಯಂತ್ರದೊಳಗೆ ನೀರು ನುಗ್ಗಿದ್ದರಿಂದ ಕೆಟ್ಟು ನಿಂತಿದ್ದು ನಂತರ ಗ್ರಾಮಸ್ಥರ ಸಹಾಯದಿಂದ ಜೆಸಿಬಿ ಯಂತ್ರದ ಮೂಲಕ ಹೊರ ತೆಗೆಯಲಾಯಿತು.

ಇನ್ನೂ ಸತ್ತೂರು ಕೆರೆ ಕೋಡಿ ತುಂಬಿ ಹರಿಯುತ್ತಿದ್ದು, ಕಂಚಿಕೇರಿ ಮಾರ್ಗವಾಗಿ ದಾವಣಗೆರೆ ರಸ್ತೆ ಸಂಪರ್ಕ ಕಡಿತವಾಗಿದೆ. ಹಳ್ಳಿಕೇರಿ ಗ್ರಾಮದ ಸುತ್ತಲೂ ನೀರು ಹರಿಯುತ್ತಿದ್ದು, ದಾವಣಗೆರೆಗೆ ಹೋಗಲು ರಸ್ತೆಯೇ ಇಲ್ಲದಂತಾಗಿದೆ. ರೋಗಿಗಳು ಹೋಗಲು ಸಾಧ್ಯವಾಗದೆ ನೀರು ಇಳಿಮುಖವಾಗುವವರೆಗೂ ಗ್ರಾಮದಲ್ಲಿ ಕಾಯುವ ಪರಿಸ್ಥಿತಿ ಎದುರಾಗಿತ್ತು. ಸತ್ತೂರು ಕೆರೆ ತುಂಬಿ ವ್ಯಾಪಕವಾಗಿ ನೀರು ಹೊರ ಹೋಗುತ್ತಿರುವುದರಿಂದ ರಸ್ತೆಯಲ್ಲಿ ಹರಿಯುತ್ತಿದ್ದು, ಕಂಚಿಕೇರಿ ಸತ್ತೂರು ಮಾರ್ಗವಾಗಿ ದಾವಣಗೆರೆಗೆ ತೆರಳುವ ವಾಹನಗಳು ಬೇರೆ ಮಾರ್ಗದ ಮೂಲಕ ವಾಪಸ್ಸು ತೆರಳಿದರು.

ಆ.29 ರಂದು ಸುರಿದ ಮಳೆಯಿಂದ ಹರಪನಹಳ್ಳಿ ಕಸಬಾ ಹೋಬಳಿಯಲ್ಲಿ ಮೆಕ್ಕೆಜೋಳ 25 ಹೆಕ್ಟೇರ್ ಅರಸಿಕೇರಿ ಹೋಬಳಿಯಲ್ಲಿ ಮೆಕ್ಕೆಜೋಳ ಹಾಗೂ ಭತ್ತ - 500 ಹೆಕ್ಟೇರ್ ತೆಲಿಗಿ ಹೋಬಳಿಯಲ್ಲಿ ಮೆಕ್ಕೆಜೋಳ ಹಾಗೂ ಭತ್ತ - 300 ಹೆಕ್ಟೇರ್ ಹೀಗೆ ಒಟ್ಟು 825 ಹೆಕ್ಟೇರ್ ಬೆಳೆ ಹಾನಿ ಸಂಭವಿಸಿದೆ.

ಹರಪನಹಳ್ಳಿ ಕಸಬಾ 46.8, ಅರಸಿಕೇರಿ 24.3, ಚಿಗಟೇರಿ 20.6, ಹಿರೇಮೆಗಳಗೆರೆ 80.2, ಉಚ್ಚಂಗಿ ದುರ್ಗ 113.6, ತೆಲಗಿ 32.4. ಹಲವಾಗಲು 55.2 ಎಂ.ಎಂ. ಮಳೆಯಾದ ವರದಿಯಾಗಿದೆ. ಮಳೆಯಿಂದ ಕೆರೆಕಟ್ಟೆಗಳು ತುಂಬಿ ಹರಿದು ಸಂಕಷ್ಟಕ್ಕೀಡಾದ ಸಂತ್ರಸ್ತರಿಗೆ ಸರ್ಕಾರದಿಂದ ಸೂಕ್ತ ಪರಿಹಾರ ದೊರಕಿಸಿ ಕೊಡುವುದಾಗಿ ಶಾಸಕ ಜಿ.ಕರುಣಾಕರ ರೆಡ್ಡಿ ತಿಳಿಸಿದ್ದಾರೆ.



## ಬಾಬ್ರಿ ಮಸೀದಿಯ ಎಲ್ಲ ಪ್ರಕರಣಗಳಿಗೆ ತೆರೆ

ನವದೆಹಲಿ, ಆ. 30 – 1992ರ ಬಾಬ್ರಿ ಮಸೀದಿ ಧ್ವಂಸಕ್ಕೆ ಸಂಬಂಧಿಸಿದಂತೆ ಉತ್ತರ ಪ್ರದೇಶ ಸರ್ಕಾರ ಹಾಗೂ ಅದರ ಅಧಿಕಾರಿಗಳ ವಿರುದ್ಧ ದಾಖಲಾಗಿದ್ದ ಹಲವಾರು ನ್ಯಾಯಾಂಗ ನಿಂದನಾ ಪ್ರಕರಣಗಳಿಗೆ ಸುಪ್ರೀಂ ಕೋರ್ಟ್ ತೆರೆ ಎಳೆದಿದೆ. ಇದರಿಂದಾಗಿ ಮಸೀದಿ ಧ್ವಂಸದಿಂದ ಉದ್ಭವಿಸಿದ ಎಲ್ಲ ಪ್ರಕರಣಗಳು ಅಂತ್ಯಗೊಂಡಂತಾಗಿವೆ.

ಕಾಲ ಕಳೆದಂತೆ ಈ ಎಲ್ಲ ಪ್ರಕರಣಗಳು ಅರ್ಥ ಕಳೆದುಕೊಂಡಿವೆ. ವಿವಾದಿತ ಜಾಗದಲ್ಲಿ ದೇವಾಲಯ ನಿರ್ಮಾಣಕ್ಕೆ 2019ರಲ್ಲೇ ಸುಪ್ರೀಂ ಕೋರ್ಟ್ ಅನುಮತಿ ನೀಡಿದೆ **(7ನೇ ಪುಟಕ್ಕೆ)**

## ಸುಪ್ರೀಂನಿಂದ ಆರ್ಥಿಕ ಮೀಸಲಾತಿ ಸಿಂಧುತ್ವ ಪರಿಶೀಲನೆ

ನವದೆಹಲಿ, ಆ. 30 - ಆರ್ಥಿಕವಾಗಿ ಹಿಂದುಳಿದವರಿಗೆ ಕಲ್ಪಿಸಲಾಗಿರುವ ಶೇ.10ರ ಮೀಸಲಾತಿಯ ಸಂವಿಧಾನಿಕ ಸಿಂಧುತ್ವ ಪರಿಶೀಲಿಸುವುದಾಗಿ ಸುಪ್ರೀಂ ಕೋರ್ಟ್ ತಿಳಿಸಿದೆ. ಉದ್ಯೋಗ ಹಾಗೂ ಶಿಕ್ಷಣದಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಶೇ.10ರ ಮೀಸಲಾತಿ ಕಲ್ಪಿಸಲು ಕೇಂದ್ರ ಸರ್ಕಾರ ನಿರ್ಧಾರ ತೆಗೆದುಕೊಂಡಿತ್ತು.

ಮುಖ್ಯ ನ್ಯಾಯಮೂರ್ತಿ ಯು.ಯು. ಲಲಿತ್ ಹಾಗೂ ನ್ಯಾಯಮೂರ್ತಿಗಳಾದ ದಿನೇಶ್ ಮಹೇಶ್ವರಿ, ಎಸ್. ರವೀಂದ್ರ ಭಟ್, ಬೇಲಾ ತ್ರಿವೇದಿ ಹಾಗೂ ಜೆ.ಬಿ. ಪರ್ದಿವಾಲ ಅವರನ್ನು ಒಳಗೊಂಡ ಪೀಠ ಮೀಸಲಾತಿ ಕುರಿತು ವಿಚಾರಣೆ ನಡೆಸಲಿದೆ. ಸೆಪ್ಟೆಂಬರ್ 6ರಂದು ಪ್ರಕರಣದ ವಿವರಗಳನ್ನು ಪರಿಶೀಲಿಸಲಾಗುವುದು ಹಾಗೂ **(7ನೇ ಪುಟಕ್ಕೆ)**




# ವಿಶ್ವ ಶ್ರೀಮಂತರಲ್ಲಿ ಗೌತಮ್ ಅದಾನಿಗೆ ಮೂರನೇ ಸ್ಥಾನ

ನವದೆಹಲಿ, ಆ. 30 – ಬ್ಲೂಮ್‌ಬರ್ಗ್ ಕುಬೇರರ ಪಟ್ಟಿಯಲ್ಲಿ ಗೌತಮ್ ಅದಾನಿ ಮೂರನೇ ಸ್ಥಾನಕ್ಕೆ ತಲುಪಿದ್ದಾರೆ. ಅವರ ಆಸ್ತಿ ಮೌಲ್ಯ 137.4 ಶತಕೋಟಿ ಡಾಲರ್ ಎಂದು ಬ್ಲೂಮ್‌ಬರ್ಗ್ ಅಂದಾಜಿಸಿದೆ.

ಎಲಾನ್ ಮಸ್ಕ್ ಹಾಗೂ ಜೆಫ್ ಬೆಜೋಸ್ ನಂತರ, ಅದಾನಿ ವಿಶ್ವದ ಮೂರನೇ ಅತ್ಯಂತ ಶ್ರೀಮಂತ ವ್ಯಕ್ತಿ ಎಂದು ಬ್ಲೂಮ್‌ಬರ್ಗ್ ವರದಿ ತಿಳಿಸಿದೆ.

ಅದಾನಿ ಸಮೂಹ ದೊಡ್ಡ ಮಟ್ಟದ ಸಾಲದ ಆಧಾರದ ಮೇಲೆ ವಿಸ್ತಾರಗೊಳ್ಳುತ್ತಿದೆ. ಇದು ಸಮಸ್ಯೆಗೆ ಕಾರಣವಾಗಬಹುದು ಎಂದು ಕ್ರೆಡಿಟ್ ಸೈಟ್ಸ್ ಸಂಸ್ಥೆಯು ಈ ತಿಂಗಳ ಆರಂಭದಲ್ಲಿ ವರದಿ ಮಾಡಿತ್ತು.

ಉದ್ಯಮಿಗಳಾದ ಎಲಾನ್ ಮಸ್ಕ್ ಅವರ ಆಸ್ತಿ ಮೌಲ್ಯ 251 ಶತಕೋಟಿ ಡಾಲರ್ ಹಾಗೂ ಜೆಫ್ ಬೆಜೋಸ್ ಅವರ ಆಸ್ತಿ ಮೌಲ್ಯ 153 ಶತಕೋಟಿ ಡಾಲರ್ ಎಂದು ಅಂದಾಜಿಸಲಾಗಿದೆ. ಅಮೆರಿಕ ಇವರಿಬ್ಬರೂ ವಿಶ್ವದ ಶ್ರೀಮಂತರ ಪಟ್ಟಿಯಲ್ಲಿ ಮೊದಲ ಎರಡು ಸ್ಥಾನಗಳಲ್ಲಿದ್ದಾರೆ ಎಂದು ಬ್ಲೂಮ್‌ಬರ್ಗ್ ತಿಳಿಸಿದೆ.

## ಆಜಾದ್ ಬೆಂಬಲಿಸಿ 64 ಮುಖಂಡರ ರಾಜೀನಾಮೆ

ಜಮ್ಮು, ಆ. 30 - ಜಮ್ಮು ಮತ್ತು ಕಾಶ್ಮೀರದ ಮಾಜಿ ಉಪ ಮುಖ್ಯಮಂತ್ರಿ ತಾರಾ ಚಂದ್ ಸೇರಿದಂತೆ ಕಾಂಗ್ರೆಸ್‌ನ 64 ಮುಖಂಡರು ಪಕ್ಷಕ್ಕೆ ರಾಜೀನಾಮೆ ನೀಡಿದ್ದಾರೆ. ಕಾಂಗ್ರೆಸ್‌ಗೆ ನಾಯಕ ಗುಲಾಂ ನಬಿ ಆಜಾದ್ ರಾಜೀನಾಮೆ ನೀಡಿದ ಬೆನ್ನಲ್ಲೇ ಈ ಬೆಳವಣಿಗೆಯಾಗಿದೆ.

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಈ ಮುಖಂಡರು ಜಂಟಿಯಾಗಿ ರಾಜೀನಾಮೆ ನೀಡಿದ್ದಾರೆ. ಐದು ದಶಕಗಳ ಕಾಲ ಕಾಂಗ್ರೆಸ್‌ನಲ್ಲಿದ್ದ ಆಜಾದ್, ಕಳೆದ ಶುಕ್ರವಾರವಷ್ಟೇ ರಾಜೀನಾಮೆ ನೀಡಿದ್ದರು. ಅವರಿಗೆ ಬೆಂಬಲಿಸಿ 64 ಮುಖಂಡರು ರಾಜೀನಾಮೆ ನೀಡಿದ್ದಾರೆ.


## ಕರಾಟೆ ಸ್ಪರ್ಧೆ : ಅಭಯ್ ದ್ವಿತೀಯ



ದಾವಣಗೆರೆ, ಆ. 30- ಶಿವಮೊಗ್ಗದಲ್ಲಿ ಇತ್ತೀಚಿಗೆ ನಡೆದ ರಾಷ್ಟ್ರೀಯ ಕರಾಟೆ ಸ್ಪರ್ಧೆ ಯಲ್ಲಿ ದಾವಣಗೆರೆ ಗರುಡ ಕರಾಟೆ ಸಂಸ್ಥೆಯ ಕ್ರೀಡಾಪಟು ಬಿ.ಎಸ್. ಅಭಯ್ ದ್ವಿತೀಯ ಸ್ಥಾನ ಗಳಿಸಿದ್ದಾರೆ. ಅಭಯ್, ಪೊಲೀಸ್ ಇಲಾಖೆಯ ಬಿ.ಪಿ. ಸುರೇಶ್ ಕುಮಾರ್ ಅವರ ಪುತ್ರ.










# ಚೀನಾ ಆಪ್‌ಗಳಿಂದ 500 ಕೋಟಿ ರೂ. ಕಬಳಿಕೆ

ನವದೆಹಲಿ, ಆ. 30 - ಚೀನಾದ ಹಲವಾರು ಆಪ್‌ಗಳು ಲಕ್ಷಾಂತರ ಭಾರತೀಯರನ್ನು ಸಾಲದ ಬಲೆಗೆ ಬೀಳಿಸಿ 500 ಕೋಟಿ ರೂ. ಕಬಳಿಸಿವೆ. ಆದರೆ, ಇವುಗಳನ್ನು ಎದುರಿಸಲು ಸರ್ಕಾರ ಯಾವುದೇ ಯೋಜನೆ ಹೊಂದಿಲ್ಲ ಎಂದು ಕಾಂಗ್ರೆಸ್ ತರಾಟೆಗೆ ತೆಗೆದುಕೊಂಡಿದೆ.

ಕಳೆದ 2021ರ ಜನವರಿ ಹಾಗೂ ಫೆಬ್ರವರಿ ನಡುವೆ ನಡೆಸಲಾದ ತನಿಖೆಯಲ್ಲಿ 1,100ಕ್ಕೂ ಹೆಚ್ಚು ಡಿಜಿಟಲ್ ಸಾಲದ ಆಪ್‌ಗಳು ಪ್ಲೇ ಸ್ಟೋರ್‌ಗಳಲ್ಲಿ ಲಭ್ಯವಿವೆ. ಆದರೆ, ಇವುಗಳ ಪೈಕಿ ಕನಿಷ್ಠ 600 ಆಪ್‌ಗಳು ಅಕ್ರಮ ಎಂದು ರಿಸರ್ವ್ ಬ್ಯಾಂಕ್ ತಿಳಿಸಿದೆ ಎಂದು ಕಾಂಗ್ರೆಸ್ ವಕ್ತಾರ ಗೌರವ್ ವಲ್ಲಭ್ ಹೇಳಿದ್ದಾರೆ.

**ಸಾಲದ ಸುಳಿಗೆ ಸಿಲುಕಿ 52 ಜನ ಆತ್ಮಹತ್ಯೆ ಮಾಡಿಕೊಂಡರೂ ಸರ್ಕಾರಿ ಸಂಸ್ಥೆಗಳು ಮಲಗಿವೆ. - ಕಾಂಗ್ರೆಸ್ ತರಾಟೆ**

2017ರಿಂದ 2020ರ ನಡುವೆ ಸಾಲ ನೀಡುವ ಡಿಜಿಟಲ್ ಆಪ್‌ಗಳ ಸಂಖ್ಯೆ 12 ಪಟ್ಟು ಹೆಚ್ಚಾಗಿದೆ. ಈ ಆಪ್‌ಗಳ ಸಾಲ ಪಡೆದು ಬ್ಲಾಕ್ ಮೇಲ್‌ಗೆ ಗುರಿಯಾದ 52 ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದವರು ಹೇಳಿದ್ದಾರೆ.

ಕೇಂದ್ರ ಸರ್ಕಾರ ಹಾಗೂ ಅದರ ಸಂಸ್ಥೆಗಳ ಅದಕ್ಷತೆಯಿಂದಾಗಿ ಜನರು ಸಾಲದ ಸುಳಿಗೆ ಸಿಲುಕಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಚೀನಾದ ಆಪ್‌ಗಳು ಹವಾಲಾ ಮೂಲಕ ದೇಶದಲ್ಲಿ 500 ಕೋಟಿ ರೂ. ಕಬಳಿಸಿವೆ. ಕೆಲ ಚೀನಾ ಆಪ್‌ಗಳನ್ನು 2020ರಲ್ಲೇ ನಿಷೇಧಿಸಲಾಗಿದೆ. ಆದರೂ, ಅವುಗಳ ವಿರುದ್ಧ ಬಿಗಿ ಕ್ರಮ ತೆಗೆದುಕೊಳ್ಳುತ್ತಿಲ್ಲ. ಮೋದಿ ಸರ್ಕಾರ ಈ ಬಗ್ಗೆ ಆದ್ಯತೆ ನೀಡುತ್ತಿಲ್ಲ ಎಂದವರು ಹೇಳಿದ್ದಾರೆ. ಚೀನಾದ ದಾಳಿಯ ವಿರುದ್ಧ ಮಾತನಾಡಲೂ ಸರ್ಕಾರಕ್ಕೆ ಧೈರ್ಯವಿಲ್ಲ. ನಮ್ಮ ವಿರುದ್ಧ ನಡೆಸಲಾಗುತ್ತಿರುವ ಅಂತರರಾಷ್ಟ್ರೀಯ ಸಂಚು ಹಾಗೂ ದಾಳಿಗೆ ಸರ್ಕಾರ ಸಂಪೂರ್ಣ ಶರಣಾಗಿದೆ ಎಂದವರು ಆರೋಪಿಸಿದ್ದಾರೆ.

ಚೀನಾದ ಆಪ್‌ಗಳು ಲಕ್ಷಾಂತರ ಭಾರತೀಯರನ್ನು ಸಾಲದ ಬಲೆಗೆ ಬೀಳಿಸಿರುವ ಬಗ್ಗೆ ಎರಡು ವರ್ಷಗಳಿಂದಲೂ ವರದಿ ಬರುತ್ತಿವೆ. ಜಾರಿ ನಿರ್ದೇಶನಾಲಯ ಹಾಗೂ ಇತರೆ ಸಂಸ್ಥೆಗಳು ಪ್ರತಿಯೊಬ್ಬ ವಿಪಕ್ಷ ನಾಯಕನ ವಿರುದ್ಧ ಕ್ರಮ ತೆಗೆದುಕೊಳ್ಳುತ್ತಿವೆ. ಆದರೆ, ಚೀನಾ ಆಪ್‌ಗಳು 500 ಕೋಟಿ ರೂ. ಕಬಳಿಸಿರುವ ಬಗ್ಗೆ ಕ್ರಮ ತೆಗೆದುಕೊಳ್ಳದೇ ಮಲಗಿವೆ ಎಂದು ವಲ್ಲಭ್ ತರಾಟೆಗೆ ತೆಗೆದುಕೊಂಡಿದ್ದಾರೆ.

# ಜಂಗಮರ ಹೆಸರಿನಲ್ಲಿ ನಕಲಿ ಪರಿಶಿಷ್ಟ ಜಾತಿ ಪ್ರಮಾಣ ಪತ್ರ : ಪ್ರತಿಭಟನೆ

ದಾವಣಗೆರೆ ಆ.30- ಬೇಡ-ಬುಡ್ಗ ಜಂಗಮರ ಹೆಸರಿನಲ್ಲಿ ನಕಲಿ ಪರಿಶಿಷ್ಟ ಜಾತಿ ಪ್ರಮಾಣ ಪತ್ರಗಳನ್ನು ಪಡೆದು, ನಿಜವಾದ ಪರಿಶಿಷ್ಟರ ಸಾಂವಿಧಾನಿಕ ಹಕ್ಕುಗಳನ್ನು ಕಸಿದುಕೊಳ್ಳುತ್ತಿರುವವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ನಗರದಲ್ಲಿ ಇಂದು ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಮಿತಿಯಿಂದ ಪ್ರತಿಭಟನೆ ನಡೆಸಲಾಯಿತು.




ಅಂಬೇಡ್ಕರ್ ವೃತ್ತದಲ್ಲಿರುವ ಡಾ.ಬಿ.ಆರ್ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ನಂತರ ಸಂಗೊಳ್ಳಿ ರಾಯಣ್ಣ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ವೀರಶೈವ ಲಿಂಗಾಯಿತ ಜಂಗಮರಿಗೆ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ನೀಡಬಾರದೆಂದು ಒತ್ತಾಯಿಸಿ ಮೆರವಣಿಗೆ ನಡೆಸಲಾಯಿತು.

ನಂತರ ಅಪರ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ವೀರಶೈವ ಲಿಂಗಾಯತ ಜಂಗಮರಿಗೆ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ನೀಡಬಾರದೆಂದು ಮನವಿ ಸಲ್ಲಿಸಲಾಯಿತು.

ಬೇಡ ಮತ್ತು ಬುಡ್ಗ ಜಂಗಮ ಸಮುದಾಯವು ಆರ್ಥಿಕವಾಗಿ, ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದ ಸಮುದಾಯವಾಗಿದೆ. ಆದರೆ ಇವರ ಹೆಸರಿನಲ್ಲಿ ವೀರಶೈವ ಲಿಂಗಾಯತ ಜಂಗಮರು ನಕಲಿ ಪರಿಶಿಷ್ಟ ಜಾತಿ ಪ್ರಮಾಣ ಪತ್ರಗಳನ್ನು ಪಡೆಯುವ ಮೂಲಕ ಪರಿಶಿಷ್ಟರ ಹಕ್ಕು, ಅನ್ನ, ಸೌಲಭ್ಯವನ್ನು ಕಸಿದುಕೊಳ್ಳುತ್ತಿದ್ದಾರೆ. ನಿಜವಾದ ಬೇಡ ಜಂಗಮರು ಬೇಟೆಯಾಡಿ ಬದುಕುವ ಜನ, ಇವರು ಆಂಧ್ರದ ಮೂಲನಿವಾಸಿಗಳಾಗಿದ್ದು, ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ವಾಸಿಸುತ್ತಿದ್ದಾರೆ.

ಗುಡ್ಡಗಾಡುಗಳಲ್ಲಿ ಗುಡಿಸಲಿನಲ್ಲಿ ವಾಸಿಸುವ, ಶಿಕ್ಷಣ, ಮೀಸಲಾತಿ ಎನ್ನುವ ಪದಗಳ ಅರ್ಥವೇ ತಿಳಿಯದ ಮುಗ್ಧ ಜನರ ಹಕ್ಕುಗಳನ್ನು ಕಸಿದುಕೊಳ್ಳುವ ಹುನ್ನಾರವನ್ನು ನಡೆಸಿ, ನಕಲಿ ಎಸ್.ಸಿ ಪ್ರಮಾಣ ಪತ್ರ ಪಡೆಯುವ ವೀರಶೈವ ಜಂಗಮರ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಬೇಕು ಎಂದು ಸಮಿತಿ ಸಂಚಾಲಕ ಕುಂದುವಾಡ ಮಂಜುನಾಥ್ ಒತ್ತಾಯಿಸಿದರು.

ಮಲೇಬೆನ್ನೂರಿನ ವಾಗೀಶ್‌ಸ್ವಾಮಿ ಅವರು ಬೇಡ ಜಂಗಮರ ಹೆಸರಿನಲ್ಲಿ ನಕಲಿ ಎಸ್.ಸಿ ಪ್ರಮಾಣ ಪಡೆದುಕೊಂಡಿದ್ದಾರೆ. ಅಧಿಕಾರಿಗಳು ಅವರ ದಾಖಲಾತಿಗಳನ್ನು ಕೂಲಂಕುಶವಾಗಿ ಪರಿಶೀಲಿಸಿ ನೈಜ ಪರಿಶಿಷ್ಟ ಜಾತಿಗೆ ಸೇರಿದ ವ್ಯಕ್ತಿ ಹೌದೋ? ಅಲ್ಲವೋ? ಎಂಬುದನ್ನು ಬಹಿರಂಗ ಪಡಿಸಬೇಕು ಎಂದು ಆಗ್ರಹಿಸಿದರು.

ಶಾಸಕ ಎಂ.ಪಿ.ರೇಣುಕಾಚಾರ್ಯ ಅವರ ಮಕ್ಕಳಿಗೆ ಎಸ್.ಸಿ ಪ್ರಮಾಣ ಪತ್ರವನ್ನು ಅವರ ಸಹೋದರ ದ್ವಾರಕೇಶಯ್ಯ ಕೊಡಿಸಿದ್ದಾರೆ ಎಂದು ಹೇಳಿದ್ದಾರೆ, ಆದರೆ ತಮ್ಮ ಮಕ್ಕಳು ಯಾವ ಜಾತಿಗೆ ಸೇರಿದವರು ಎಂದು ಜನ್ಮ ನೀಡಿದ ತಂದೆಗೆ ಮಾತ್ರ ತಿಳಿದಿರುತ್ತದೆ. ಹಾಗಾಗಿ ರೇಣುಕಾಚಾರ್ಯ ಅವರ ಮಕ್ಕಳು ತಮ್ಮ ಮಕ್ಕಳು, ಹೌದೋ ? ಅಲ್ಲವೋ ? ಎಂದು ಪ್ರಶ್ನಿಸಿದರು.

ಪ್ರತಿಭಟನೆಯಲ್ಲಿ ಎ.ಬಿ ರಾಮಚಂದ್ರಪ್ಪ, ವೀರೇಶ್ ಮತ್ತು ಕರ್ನಾಟಕ ರಾಜ್ಯ ಬೇಡ-ಬುಡ್ಗ ಜಂಗಮ ಸಮಾಜದ ರಾಜ್ಯ ಉಪಾಧ್ಯಕ್ಷ ಸಣ್ಣಾಜಯ್ಯ, ದ.ಸಂ.ಸ ಮಹಿಳಾ ಒಕ್ಕೂಟದ ವಿಜಯಮ್ಮ, ತಾಲ್ಲೂಕು ಸಂಚಾಲಕರುಗಳಾದ ಚಿತ್ರಲಿಂಗಪ್ಪ ಚನ್ನಗಿರಿ, ಪರಮೇಶ್ ಹೊನ್ನಾಳಿ, ಮಲ್ಲೇಶ್ ಜಗಳೂರು, ಮಹಾಂತೇಶ್ ಹರಿಹರ, ಚಂದ್ರಪ್ಪ ನ್ಯಾಮತಿ, ಅಣಜಿ ಹನುಮಂತ, ನಿಂಗರಾಜ ಗಾಂಧಿನಗರ, ಗುಮ್ಮನೂರು ಹನುಮಂತ, ಹಾಲುವರ್ತಿ ಮಹಾಂತೇಶ್, ಬೇತೂರು ಹನುಮಂತ, ಪ್ರದೀಪ್ ಕೆಟಿಜೆ ನಗರ, ಬೇತೂರು ಅರುಣ್ ಸೇರಿದಂತೆ ಇತರರು ಭಾಗವಹಿಸಿದ್ದರು.

# ಬಿದಿರಿನಿಂದ ನಿರ್ಮಿಸಿದ ಮಂಟಪದಲ್ಲಿ ಗಣೇಶನ ಪ್ರತಿಷ್ಠಾಪನೆ



ನಗರದ ಬಂಬೂ ಬಜಾರ್‌ನ ಮೇದಾರ ಸಮಾಜದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನ ಹಾಗೂ ಮೇದಾರ ಗಿರಿಜನ ಅಭ್ಯುದಯ ಸೇವಾ ಸಂಘದ ವತಿಯಿಂದ 50ನೇ ವರ್ಷದ ಗಣೇಶೋತ್ಸವವನ್ನು ಪೂರ್ಣ ಪ್ರಮಾಣದ ಬಿದಿರಿನಿಂದ ಕೇದಾರನಾಥ ದೇವಸ್ಥಾನದ ಮಾದರಿಯಲ್ಲಿ ನಿರ್ಮಿತವಾದ ಮಂಟಪದಲ್ಲಿ ಪ್ರತಿಷ್ಠಾಪನೆ ಮಾಡಲಾಗುತ್ತಿದೆ.

ಮಂಟಪವನ್ನು ಯಾವುದೇ ರಾಸಾಯನಿಕ ವಸ್ತುಗಳನ್ನು ಉಪಯೋಗಿಸದೇ ಪ್ರಾಕೃತಿಕವಾಗಿ ಬೆಳೆದ ಬಿದಿರಿನ ಸಹಾಯದಿಂದ ಮೇದಾರ ಸಮಾಜದ ಕರಕುಶಲಕರ್ಮಿಗಳ ಮಾರ್ಗದರ್ಶನದಲ್ಲಿ 25 ಅಡಿ ಅಗಲ ಮತ್ತು 55 ಅಡಿ ಉದ್ದ ಹಾಗೂ 50 ಅಡಿ ಎತ್ತರದ ಕೇದಾರ ದೇವಸ್ಥಾನದ ಮಂಟಪವನ್ನು ಸುಮಾರು 100 ಜನ ಕರಕುಶಲ ಕರ್ಮಿಗಳು 15 ದಿನಗಳ ಸತತ ಪರಿಶ್ರಮದಿಂದ ತುಂಬಾ ಸೊಗಸಾಗಿ ಬಂಬೂಬಜಾರ್‌ನ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಆವರಣದಲ್ಲಿ ನಿರ್ಮಿಸಿದ್ದಾರೆ. ಅದೇ ರೀತಿಯಾಗಿ ಮಂಟಪದ ಮುಂಭಾಗದಲ್ಲಿ ನಂದಿಯನ್ನು ಮತ್ತು ದ್ವಾರ ಬಾಗಿಲಿನಲ್ಲಿ ಶಿವಲಿಂಗವನ್ನು ಸಹ ಬಿದಿರಿನಿಂದ ನಿರ್ಮಿಸಿ 50ನೇ ವರ್ಷದ ಅಮೃತ ಗಣೇಶೋತ್ಸವಕ್ಕೆ ಮೆರುಗು ತಂದಿದ್ದಾರೆ.

ನಗರದ ಬೀದಿಗಳಲ್ಲಿ ಕೇಸರಿ ಬಣ್ಣದ ಧ್ವಜಗಳು ಮತ್ತು ಬಂಟಿಂಗ್ಸ್ ಸಾರ್ವಜನಿಕರಿಗೆ ಸ್ವಾಗತ ಕೋರುವ ಫ್ಲೆಕ್ಸ್‌ಗಳನ್ನು ಮೇದಾರ ಸಮಾಜದ ಅಧ್ಯಕ್ಷ ಟಿ. ಬಸವರಾಜ್, ಕಾರ್ಯದರ್ಶಿ ಕೆ. ಹನುಮಂತಪ್ಪ, ಖಜಾಂಚಿ ಗಿರೀಶ್, ಹೆಚ್.ಯು. ಉಪಾಧ್ಯಕ್ಷರಾದ ತಿಮ್ಮಣ್ಣ, ಸಂಡೂರು ಶ್ರೀನಿವಾಸ್, ಹೆಚ್. ರಾಘವೇಂದ್ರ, ಸಿ.ಬಿ. ಸೋಮಣ್ಣ, ಜಿ. ಉಮೇಶ್, ಜಿ. ಪ್ರಕಾಶ್, ನರೇಶ್, ಶಿವಕುಮಾರ್, ಯಲ್ಲೇಶ್, ಬಸವರಾಜ ಬೇತೂರು, ಲಕ್ಷ್ಮಣ ಬೆತ್ತ, ಬಸವರಾಜ ಬಿ.ಟಿ., ನಾಗರಾಜ, ರವಿ ಬೆತ್ತ, ರಾಘವೇಂದ್ರ ಸಿ., ದೇವೇಂದ್ರ, ಇವರುಗಳ ಮಾರ್ಗದರ್ಶನದಲ್ಲಿ ಅಸಂಖ್ಯಾತ ಮೇದಾರ ಕರಕುಶಲಕರ್ಮಿಗಳ ಸಹಾಯದಿಂದ ಹಾಕಿದ್ದಾರೆ.

## ಆರ್ಥಿಕ ಮೀಸಲಾತಿ ಸಿಂಧುತ್ವ ಪರಿಶೀಲನೆ

(5ನೇ ಪುಟದಿಂದ) ಸೆಪ್ಟೆಂಬರ್ 13ರಿಂದ ವಿಚಾರಣೆ ಆರಂಭವಾಗಲಿದೆ. ಸಂವಿಧಾನಕ್ಕೆ 103ನೇ ತಿದ್ದುಪಡಿ ತರುವ ಮೂಲಕ ಆರ್ಥಿಕವಾಗಿ ಹಿಂದುಳಿದವರಿಗೆ ಪ್ರವೇಶ ಹಾಗೂ ಸಾರ್ವಜನಿಕ ಸೇವೆಗಳಲ್ಲಿ ಮೀಸಲಾತಿ ಕಲ್ಪಿಸಲಾಗಿತ್ತು. ಮುಸ್ಲಿಮರಿಗೆ ಮೀಸಲಾತಿ ಕಲ್ಪಿಸಲು ಆಂಧ್ರ ಪ್ರದೇಶ ಸರ್ಕಾರ ಹೊರಡಿಸಿದ್ದ ಆದೇಶವನ್ನು ಅಲ್ಲಿನ ಹೈಕೋರ್ಟ್ ರದ್ದುಗೊಳಿಸಿದ ತೀರ್ಪಿನ ಬಗ್ಗೆಯೂ ಉನ್ನತ ನ್ಯಾಯಾಲಯ ವಿಚಾರಣೆ ನಡೆಸಲಿದೆ.

# ನಗರದಲ್ಲಿಂದು ಹಿಂದೂ ಮಹಾ ಗಣೇಶೋತ್ಸವ

ಹಿಂದೂ ಮಹಾಗಣಪತಿ ಟ್ರಸ್ಟ್ ವತಿಯಿಂದ 5ನೇ ವರ್ಷದ ಹಿಂದೂ ಮಹಾ ಗಣೇಶೋತ್ಸವವು ಇಂದು ಸಂಜೆ 6ಕ್ಕೆ ಸರ್ಕಾರಿ ಹೈಸ್ಕೂಲ್ ಮೈದಾನದಲ್ಲಿ ನಡೆಯಲಿದೆ.

ಕಾರ್ಯಕ್ರಮದ ಸಾನ್ನಿಧ್ಯವನ್ನು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ವಹಿಸಲಿದ್ದಾರೆ. ಎಸ್.ಎ. ರವೀಂದ್ರನಾಥ್ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಬಸವರಾಜ ಬೊಮ್ಮಾಯಿ, ಬಿ.ಎಸ್. ಯಡಿಯೂರಪ್ಪ, ಜಯಮ್ಮ ಗೋಪಿನಾಯ್ಕ್, ಕೆ.ಎಂ. ಸುರೇಶ್, ವಿಶ್ವನಾಥ್ ಮುದಜ್ಜಿ ಪಾಲ್ಗೊಳ್ಳುವರು. ಶಾಮನೂರು ಶಿವಶಂಕರಪ್ಪ ಗೌರವಾಧ್ಯಕ್ಷತೆ ವಹಿಸುವರು.

ಗೌರವಾನ್ವಿತ ಆಹ್ವಾನಿತರಾಗಿ ಜಿ.ಎಂ. ಸಿದ್ದೇಶ್ವರ, ಮಾಡಾಳು ವಿರುಪಾಕ್ಷಪ್ಪ, ಎಂ.ಪಿ. ರೇಣುಕಾಚಾರ್ಯ, ವೈ.ಎ. ನಾರಾಯಣಸ್ವಾಮಿ ಮುಂತಾದ ಗಣ್ಯರು ಪಾಲ್ಗೊಳ್ಳುವರು.

# ಬೆಂಗಳೂರಿನ ಈದ್ಗಾ ಮೈದಾನದಲ್ಲಿ ಯಥಾಸ್ಥಿತಿ

ನವದೆಹಲಿ, ಆ. 30 – ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ ಈದ್ಗಾ ಮೈದಾನದಲ್ಲಿ ಗಣೇಶ ಮೂರ್ತಿ ಸ್ಥಾಪಿಸಲು ಅನುಮತಿ ನಿರಾಕರಿಸಿರುವ ಸುಪ್ರೀಂ ಕೋರ್ಟ್, ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಆದೇಶಿಸಿದೆ.

ಸಂಬಂಧಿಸಿದವರು ಈ ವಿವಾದ ಇತ್ಯರ್ಥಕ್ಕಾಗಿ ಹೈಕೋರ್ಟ್ ಮೊರೆ ಹೋಗಬಹುದು ಎಂದು ನ್ಯಾಯಮೂರ್ತಿ ಇಂದಿರಾ ಬ್ಯಾನರ್ಜಿ ಅವರ ನೇತೃತ್ವದ ತ್ರಿಸದಸ್ಯ ಪೀಠ ತಿಳಿಸಿದೆ. ಪೀಠದಲ್ಲಿ ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕ ಹಾಗೂ ಎಂ.ಎಂ. ಸುಂದರೇಶ್ ಅವರಿದ್ದಾರೆ.

ಕಳೆದ ಆಗಸ್ಟ್ 26ರಂದು ಆದೇಶವೊಂದನ್ನು ಹೊರಡಿಸಿದ್ದ ಕರ್ನಾಟಕ ಹೈಕೋರ್ಟ್, ಈದ್ಗಾ ಮೈದಾನದ ಬಳಕೆಗೆ ಸಂಬಂಧಿಸಿದಂತೆ ಬೆಂಗಳೂರು ನಗರ ಜಿಲ್ಲಾಧಿಕಾರಿಗೆ ಬಂದಿರುವ ಮನವಿಗಳ ಕುರಿತು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ತಿಳಿಸಿತ್ತು.

ಈ ಆದೇಶವನ್ನು ಪ್ರಶ್ನಿಸಿ ಕರ್ನಾಟಕ ವಕ್ಫ್ ಮಂಡಳಿ ಸುಪ್ರೀಂ ಕೋರ್ಟ್ ಮೊರೆ ಹೋಗಿತ್ತು.

# ಶರಣರ ಭಾವಚಿತ್ರ ಸುಟ್ಟು ಪ್ರತಿಭಟನೆ



ದಾವಣಗೆರೆ, ಆ.30- ಶ್ರೀ ಶಿವಮೂರ್ತಿ ಮುರುಘಾ ಶರಣರ ವಿರುದ್ಧ ಪ್ರಗತಿಪರ ಸಂಘಟನೆಗಳ ಒಕ್ಕೂಟದ ವತಿಯಿಂದ ನಗರದ ಜಯದೇವ ವೃತ್ತದಲ್ಲಿ ಇಂದು ಪ್ರತಿಭಟನೆ ನಡೆಸಿ ಮುರುಘಾ ಶರಣರ ಭಾವಚಿತ್ರವನ್ನು ದಹಿಸಿ ಆಕ್ರೋಶ ವ್ಯಕ್ತಪಡಿಸಲಾಯಿತು.

ಪೋಕ್ಸೋ ಕಾಯ್ದೆ ಅಡಿ ಆರೋಪಿಯಾಗಿರುವ ಶರಣರನ್ನು ಕೂಡಲೇ ಬಂಧಿಸಿ ಸಂತ್ರಸ್ತ ಬಾಲಕಿಯರನ್ನು ರಕ್ಷಣೆ ಮಾಡಬೇಕು. ಅವರ ಖಾಸಗಿತನವನ್ನು ಕಾಪಾಡಿ ಎಲ್ಲ ಸಂತ್ರಸ್ತರಿಗೆ ತಲಾ ಒಂದು ಕೋಟಿ ಪರಿಹಾರ ನೀಡಬೇಕು ಎಂದು ವಕೀಲ ಗುಮ್ಮನೂರು ಮಲ್ಲಿಕಾರ್ಜುನ್ ಒತ್ತಾಯಿಸಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಘಟನಾ ಸಂಚಾಲಕ ಹೆಗ್ಗೆರೆ ರಂಗಪ್ಪ ಮಾತನಾಡಿ, ಮುರುಘಾ ಶರಣರ ಮೇಲೆ ಪೋಕ್ಸೋ ಅಲ್ಲದೇ ಅಟ್ರಾಸಿಟಿ ಕಾಯ್ದೆ ಅನ್ವಯ ದೂರು ದಾಖಲಾಗಿದ್ದರೂ ಅವರನ್ನು ಬಂಧಿಸದೇ ಕಾಲಹರಣ ಮಾಡುತ್ತಿರುವುದರಿಂದ ಸಂತ್ರಸ್ತರಿಗೆ ನ್ಯಾಯ ಸಿಗುವುದು ಅನುಮಾನ ಇದೆ. ಆದ್ದರಿಂದ ಈ ಕೂಡಲೇ ಪ್ರಕರಣವನ್ನು ಬಿಜೆಪಿಯೇತರ ಸರ್ಕಾರ ಇರುವ ರಾಜ್ಯಕ್ಕೆ ವರ್ಗಾವಣೆ ಮಾಡಿ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಿಂದ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ರೈತ ಮುಖಂಡರಾದ ಬಲ್ಲೂರು ರವಿಕುಮಾರ್, ಅಜ್ಜಯ್ಯ, ಸಿಐಟಿಯುನ ಆನಂದರಾಜ್, ಕದಸಂಸ ಮುಖಂಡರಾದ ಕಾರಿಗನೂರು ನಾಗರಾಜ್, ಎಲ್. ಜಯಪ್ಪ, ಅಳಗವಾಡಿ ನಿಂಗರಾಜ್, ಬಾಬು, ಗುಮ್ಮನೂರು ರಾಮಚಂದ್ರ, ಮೇಗಳಗೆರೆ ಮಂಜುನಾಥ್, ಸಿಪಿಐನ ರಂಗನಾಥ್, ಸಿಪಿಐಎಮ್‌ನ ಶ್ರೀನಿವಾಸ್ ಮುಂತಾದವರು ಭಾಗವಹಿಸಿದ್ದರು.

# ವಿನಾಯಕ ಚೌತಿ ಸಂಭ್ರಮ

(5ನೇ ಪುಟದಿಂದ) ಬೃಹನ್ಮಠದ ಸಿರಿಗೆರೆ ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಮತ್ತಿತರರು ಭಾಗವಹಿಸಲಿದ್ದಾರೆ.

**ಒಣಕೊಬ್ಬರಿ ಗಣಪ:** ಹಿಂದೂ ಯುವ ಶಕ್ತಿಯಿಂದ ತೊಗಟವೀರ ಕಲ್ಯಾಣ ಮಂಟ ಪದಲ್ಲಿ 201 ಕೆ.ಜಿ. ಒಣ ಕೊಬ್ಬರಿ ಯಿಂದ 13 ಅಡಿ ಎತ್ತರದ ವಿಗ್ರಹವನ್ನು ಪ್ರತಿಷ್ಠಾ ಪಿಸಲಾಗುತ್ತಿದೆ. ಸೆ.10 ರವರೆಗೆ ಗಣೇಶನ ದರ್ಶನ ಇರಲಿದೆ.



**ದಾವಣಗೆರೆ ರಾಂ ಅಂಡ್ ಕೋ ಸರ್ಕಲ್‌ನಲ್ಲಿನ ರಾಂ ಅಂಡ್ ಕೋ ಗೆಳೆಯರ ಬಳಗದ 30ನೇ ವರ್ಷದ ಗಣೇಶೋತ್ಸವ ಕಾರ್ಯಕ್ರಮದಲ್ಲಿ 11 ದಿನಗಳ ಕಾಲ ಯಡಿಯೂರು ಸಿದ್ದಲಿಂಗೇಶ್ವರ ಸ್ವಾಮಿ ರೂಪಕ ಪ್ರದರ್ಶನ ಮಾಡಲಾಗುವುದು ಎಂದು ಅಧ್ಯಕ್ಷರಾದ ನಾಗೇಂದ್ರ ರೆಡ್ಡಿ ತಿಳಿಸಿದ್ದಾರೆ.**

**ವಿನೋಬನಗರದಲ್ಲಿ ಸಂಭ್ರಮ:** ವಿನೋಬನಗರದ 2ನೇ ಮುಖ್ಯ ರಸ್ತೆಯಲ್ಲಿ ಶ್ರೀ ವೀರ ವರಸಿದ್ಧಿ ವಿನಾಯಕ ಸೇವಾ ಸಮಿತಿ ವತಿಯಿಂದ 30ನೇ ವರ್ಷದ ಗಣೇಶೋತ್ಸವ ಆಚರಿಸಲಾಗುತ್ತಿದೆ. ಇಂದು ಬೆಳಿಗ್ಗೆ ಶ್ರೀ ಶಂಭುಲಿಂಗೇಶ್ವರ ದೇವಸ್ಥಾನದಿಂದ ಶ್ರೀ ವೀರ ವರಸಿದ್ಧಿ ವಿನಾಯಕ ಸ್ವಾಮಿ ಮೂರ್ತಿಯನ್ನು ಮೆರವಣಿಗೆ ಮೂಲಕ ತಂದು ಶ್ರೀ ರಾಮಕೃಷ್ಣಾಶ್ರಮದ ಎದುರು ಇರುವ ವಿನಾಯಕ ಮಂಟಪದಲ್ಲಿ ಪ್ರತಿಷ್ಠಾಪಿಸಲಾಗುತ್ತಿದೆ.

ಪ್ರತಿ ದಿನ ಸಂಜೆ ಶ್ರೀ ಹರಿಹರೇಶ್ವರ ಸ್ವಾಮಿ ಇತಿಹಾಸದ ರೂಪಕ ಪ್ರದರ್ಶನವಿರಲಿದೆ.

ಸೆ.4 ರಂದು ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಸಮುದಾಯ ಭವನದಲ್ಲಿ ಅನ್ನಸಂತರ್ಪಣೆ ಇದ್ದು, ಏತನ್ಮಧ್ಯೆ ಸೋಮವಾರ ತಡರಾತ್ರಿಯಿಂದ ಮಂಗಳವಾರ ಮುಂಜಾನೆವರೆಗೆ ಸುರಿದ ಮಳೆ ಹಬ್ಬದ ಸಂಭ್ರಕ್ಕೆ ತಣ್ಣೀರು ಎರಚುವುದೇ? ಎಂಬ ಆತಂಕವೂ ಸಂಘಟಕರಲ್ಲಿ ಕಾಡುತ್ತಿದೆ.

## ಇಂದು ಮಾಂಸ ಮಾರಾಟ ನಿಷೇಧ

ಶ್ರೀ ಗಣೇಶ ಚತುರ್ಥಿಯ ಪ್ರಯುಕ್ತ ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಾಂಸದ ಉದ್ದಿಮೆ ನಡೆಸುತ್ತಿರುವ ಉದ್ದಿಮೆದಾರರು ಇಂದು ಪ್ರಾಣಿ ವಧೆ, ಪ್ರಾಣಿ ಮಾಂಸ ಹಾಗೂ ಮೀನಿನ ಮಾಂಸ ಮಾರಾಟವನ್ನು ನಿಷೇಧಿಸಲಾಗಿದ್ದು, ಅಂದು ಮಾಂಸ ಮಾರಾಟ ಮಾಡಬಾರದು ಎಂದು ಮಹಾನಗರ ಪಾಲಿಕೆ ಆರೋಗ್ಯಾಧಿಕಾರಿ ತಿಳಿಸಿದ್ದಾರೆ.

# ಬಾಬ್ರಿ ಎಲ್ಲ ಪ್ರಕರಣಗಳಿಗೆ ತೆರೆ

(5ನೇ ಪುಟದಿಂದ) ಎಂದು ನ್ಯಾಯಾಲಯ ಹೇಳಿದೆ.

1992ರಲ್ಲಿ ನ್ಯಾಯಾಂಗ ನಿಂದನಾ ಪ್ರಕರಣ ದಾಖಲಿಸಿದ್ದ ಮೊಹಮ್ಮದ್ ಅಸ್ಲಾಂ ಭುರೆ ಅವರು 2010ರಲ್ಲಿ ನಿಧನರಾಗಿ ದ್ದರು. ಅರ್ಜಿದಾರರ ಜಾಗಕ್ಕೆ ಅಮಿಕಸ್ ಕ್ಯೂರಿ ನೇಮಿಸ ಬೇಕೆಂದು ವಕೀಲ ಎಂ.ಎಂ. ಕಶ್ಯಪ್ ಅವರು ದಾಖಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ.

# ಮಳೆಯಿಂದ 2 ಸಾವಿರ ಕೋಟಿ ನಷ್ಟ

(5ನೇ ಪುಟದಿಂದ) ಎನ್‌ಡಿಆರ್‌ಎಫ್ ನಿಧಿಯಿಂದ ಒಂದು ಸಾವಿರ ಕೋಟಿ ರೂ.ಗಳನ್ನು ತುರ್ತಾಗಿ ಬಿಡುಗಡೆ ಮಾಡುವಂತೆ ಕೋರುವುದಾಗಿ ತಿಳಿಸಿದರು.

ಮಳೆ ಪೂರ್ಣವಾಗಿ ನಿಂತ ನಂತರ ಜಿಲ್ಲಾಡಳಿತದಿಂದ ವರದಿ ತರಿಸಿ, ಕೇಂದ್ರಕ್ಕೆ ಮತ್ತೊಂದು ವರದಿ ಸಲ್ಲಿಸುವುದಾಗಿಯು ಹೇಳಿದರು.

**ಲಕ್ಷ್ಮಿ ಬಾಲಾಜಿ ಸಿಲ್ವರ್ ಫೋಟೋ ಫ್ರೇಮ್**

ಸರ್ವಾಲಂಕೃತ ದೇವರ ಫೋಟೋಗಳು ವರಮಹಾಲಕ್ಷ್ಮೀ ಪೂಜೆಗೆ ಗೌರಿ, ಗಣೇಶ, ಲಕ್ಷ್ಮಿ ಪೀಠ, ಲಕ್ಷ್ಮಿ ಮುಖ, ಸೀರೆ, ಅಲಂಕೃತ ಫೋಟೋಗಳು ದೊರೆಯುತ್ತವೆ.

ಶಿವ-ಪಾರ್ವತಿ, ಬಾಲಾಜಿ ಪದ್ಮಾವತಿ ಲೈಟಿನಿಂಗ್ ಫೋಟೋಗಳು, ಮ್ಯಾರೇಜ್ ಗಿಫ್ಟ್, ಪ್ಯೂರ್ ಸಿಲ್ವರ್ ಫೋಟೋ ರೂ. 150, 200, 360 ರೂ.ಗಳಲ್ಲಿ ದೊರೆಯುತ್ತವೆ. ಮದುವೆ ಹಾಗೂ ಇತರೆ ಶುಭ ಸಮಾರಂಭಗಳಿಗೆ ಗೃಹ ಪ್ರವೇಶ, ಸತ್ಯ ನಾರಾಯಣ ಪೂಜೆಗೆ ಸಿಲ್ವರ್ ಫೋಟೋ ದೊರೆಯುತ್ತವೆ. ದೇವರ ಹಾರ, ದೇವರ ಕಿರೀಟ, ಡಾಬೂ, ವಂಕಿ ದೊರೆಯುತ್ತವೆ.

#34 ಮುರುಘರಾಜೇಂದ್ರ ಕಾಂಪ್ಲೆಕ್ಸ್ ಶಿವಪ್ಪಯ್ಯ ವೃತ್ತದ ಹತ್ತಿರ, ದಾವಣಗೆರೆ-2.
99451 59582

# ಗೌಡ ಸಾರಸ್ವತ ಸಮಾಜದ 47ನೇ ವರ್ಷದ ಗಣೇಶೋತ್ಸವ

ದಾವಣಗೆರೆ, ಆ.30- ಗೌಡ ಸಾರಸ್ವತ ಸಮಾಜದ 47ನೇ ವರ್ಷದ ಶ್ರೀ ಗಣೇಶೋತ್ಸವವನ್ನು ನಾಳೆ ದಿನಾಂಕ 31 ರಿಂದ ಸೆಪ್ಟೆಂಬರ್ 4ರವರೆಗೆ 5 ದಿನಗಳ ಕಾಲ ಆಚರಿಸಲಾಗುವುದು ಎಂದು ಸಮಾಜದ ಅಧ್ಯಕ್ಷರಾದ ಶ್ರೀಮತಿ ಅಮಿತಾ ಡಾ. ವೇಣುಗೋಪಾಲ್ ಪೈ ತಿಳಿಸಿದ್ದಾರೆ.

ಪ್ರತಿ ದಿನ ಸಂಜೆ ಸಾಮೂಹಿಕ ಭಜನೆ ಜೊತೆಯಲ್ಲಿ ಮಕ್ಕಳಿಗೆ, ಪುರುಷರಿಗೆ, ಮಹಿಳೆಯರಿಗೆ ಆಟೋಟ ಸ್ಪರ್ಧೆ, ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು, ಛದ್ಮವೇಷ ಸ್ಪರ್ಧೆ ನಡೆಯಲಿದ್ದು, ಸೆಪ್ಟೆಂಬರ್ 3ರ ಶನಿವಾರ ಸಂಜೆ ಸರ್ವ ಸದಸ್ಯರ ಮಹಾಸಭೆ ನಡೆಯಲಿದೆ ಎಂದು ಸಮಾಜದ ಪ್ರಧಾನ ಕಾರ್ಯದರ್ಶಿ ಕೆ.ವೆಂಕಟರಮಣ ಭಟ್ ತಿಳಿಸಿದ್ದಾರೆ.

# ದೈವಜ್ಞ ಸಮಾಜದ ಗಣೇಶೋತ್ಸವಕ್ಕೆ ಕಾರವಾರದ ಮೂರ್ತಿ



ದಾವಣಗೆರೆ, ಆ. 30 - ನಗರದ ದೈವಜ್ಞ ಸಮಾಜದ ವತಿಯಿಂದ ಗಣೇಶೋತ್ಸವಕ್ಕೆ ಮೂರ್ತಿಯನ್ನು ಕಾರವಾರದಿಂದ ತರಿಸಲಾಗುತ್ತಿದೆ. ಕಾರವಾರದ ಕಲಾವಿದ ರಾಮ್ ಬಂಡೇಕರ್ ಅವರು 300 ಕೆಜಿ ತೂಕದ 10 ಅಡಿ ಎತ್ತರದ ಈ ಮೂರ್ತಿಯನ್ನು ತಯಾರಿಸಿದ್ದಾರೆ.

ಗುಜರಾತ್‌ನಿಂದ ತರಿಸಿದ ಮಣ್ಣಿನಿಂದ ಈ ಮೂರ್ತಿ ತಯಾರಿಸಿರುವುದಾಗಿ ಹೇಳಿದ್ದಾರೆ.

ಉದ್ಯಮಿ ಸಾಯಿಪ್ರಕಾಶ್ ಎಸ್. ವೆರ್ಣೇಕರ್ ಅವರು ಈ ಮೂರ್ತಿಯನ್ನು ನಗರಕ್ಕೆ ತರಿಸುತ್ತಿದ್ದಾರೆ. ಅವರು ಮೂರ್ತಿಯ ವೆಚ್ಚವನ್ನು ಭರಿಸಿದ್ದಾರೆ.

# ತೆಲಂಗಾಣ : ಸಂತಾನ ಹರಣ ಶಸ್ತ್ರಚಿಕಿತ್ಸೆ ನಂತರ ನಾಲ್ವರು ಮಹಿಳೆಯರ ಸಾವು

ಹೈದರಾಬಾದ್, ಆ. 30 – ತೆಲಂಗಾಣದ ರಂಗಾ ರೆಡ್ಡಿ ಜಿಲ್ಲೆಯಲ್ಲಿರುವ ಸರ್ಕಾರಿ ಆಸ್ಪತ್ರೆಯೊಂದರಲ್ಲಿ ಸಂತಾನ ಹರಣ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ನಾಲ್ವರು ಮಹಿಳೆಯರು ಸಾವನ್ನಪ್ಪಿದ್ದಾರೆ. ಐದು ದಿನಗಳ ಹಿಂದೆ ಶಸ್ತ್ರಚಿಕಿತ್ಸೆ ನಡೆಸಲಾಗಿತ್ತು. ಈ ಬಗ್ಗೆ ಸಮಗ್ರ ತನಿಖೆಗೆ ಆದೇಶಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆಗಸ್ಟ್ 25ರಂದು ರಂಗಾ ರೆಡ್ಡಿ ಜಿಲ್ಲೆಯ ಇಬ್ರಾಹಿಂಪಟ್ಟಣಂನಲ್ಲಿ 34 ಮಹಿಳೆಯರಿಗೆ ಡಬಲ್ ಪಂಕ್ಚರ್ ಲ್ಯಾಪ್ರೊಸ್ಕೊಪಿ (ಡಿ.ಪಿ.ಎಲ್.) ಶಸ್ತ್ರಚಿಕಿತ್ಸೆ ನಡೆಸಲಾಗಿತ್ತು. ಈ ಪೈಕಿ ನಾಲ್ವರು ಸಾವನ್ನಪ್ಪಿದ್ದಾರೆ. ಆದರೆ, ಉಳಿದ 30 ಜನರಿಗೆ ಯಾವುದೇ ಮಾರಣಾಂತಿಕ ಅಪಾಯ ಕಂಡು ಬಂದಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ. ಮೃತರ ಕುಟುಂಬಕ್ಕೆ ತಲಾ ಐದು ಲಕ್ಷ ರೂ. ಪರಿಹಾರ ಮತ್ತು ಸರ್ಕಾರಿ ಯೋಜನೆಯಡಿ ಮನೆಗಳನ್ನು ನೀಡುವುದಾಗಿ ರಾಜ್ಯ ಸರ್ಕಾರ ತಿಳಿಸಿದೆ.

# ಜಿ.ಪಂ ಉಪ ಕಾರ್ಯದರ್ಶಿ ಮೇಜರ್ ಡಾ. ಹರ್ಷ ನಿಧನ

ದಾವಣಗೆರೆ, ಆ.30- ದಾವಣಗೆರೆ ಜಿಲ್ಲಾ ಪಂಚಾಯಿತಿಯ ಉಪ ಕಾರ್ಯದರ್ಶಿ ಮೇಜರ್ ಡಾ. ಹರ್ಷ ಅವರು ಹೃದಯಾಘಾತದಿಂದ ಇಂದು ನಿಧನರಾಗಿದ್ದಾರೆ.



ದಾವಣಗೆರೆ ತಾಲ್ಲೂಕಿನ ಕಂದಗಲ್ ಗ್ರಾಮದವರಾದ ಅವರು ದಾವಣಗೆರೆಯ ಜೆಜೆಎಂಸಿ ವೈದ್ಯಕೀಯ ಕಾಲೇಜಿನಲ್ಲಿ 2003 - 09 ರ ಬ್ಯಾಚಿನಲ್ಲಿ ಎಂಬಿಬಿಎಸ್ ಮುಗಿಸಿದ್ದರು. ಮುಂದೆ ಕ್ಯಾಪ್ಟನ್ ಆಗಿ ಭಾರತೀಯ ಸೇನೆ ಸೇರಿ ಅಲ್ಲಿ 2010 ರಿಂದ 2015 ರ ವರೆಗೆ ಕಾರ್ಯನಿರ್ವಹಿಸಿ ಮೇಜರ್ ಆಗಿ ಶಾರ್ಟ್ ಸರ್ವೀಸ್ ನಿವೃತ್ತಿಯಾಗಿದ್ದರು.

2016 ರ ಕೆಎಎಸ್ ಬ್ಯಾಚಿನಲ್ಲಿ ಆಯ್ಕೆಯಾಗಿದ್ದ ಅವರು, ಕಾರ್ಕಳ ತಾಲ್ಲೂಕಿನ ಕಾರ್ಯನಿರ್ವಹಣಾಧಿಕಾರಿಯಾಗಿ, ದಾವಣಗೆರೆ ತಾಲ್ಲೂಕು ಕಾರ್ಯನಿರ್ವಹಣಾಧಿಕಾರಿಯಾಗಿಯೂ ಕಾರ್ಯ ನಿರ್ವಹಿಸಿದ್ದರು. ಇತ್ತೀಚೆಗಷ್ಟೇ ಮುಂಬಡ್ತಿ ಪಡೆದು ರಾಮನಗರ ಜಿಲ್ಲಾ ಪಂಚಾಯಿತಿಯ ಉಪ ಕಾರ್ಯದರ್ಶಿಯಾಗಿದ್ದರು. ಪತ್ನಿ ಹಾಗೂ ಐದು ವರ್ಷದ ಹಾಗೂ ಮೂರು ವರ್ಷದ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.



**ಗೌರಿ - ಗಣೇಶ ಹಬ್ಬದ ಶುಭಾಶಯಗಳು**

ನಮ್ಮೆಲ್ಲಾ ಆತ್ಮೀಯ ಬಂಧು - ಮಿತ್ರರಿಗೂ, ಸರ್ವ ನಾಗರಿಕರಿಗೂ ಗೌರಿ-ಗಣೇಶ ಹಬ್ಬದ ಹಾರ್ದಿಕ ಶುಭಾಶಯಗಳು.

**ಡಿ. ಕೆ. ಸಂಗಮೇಶ್ ಎಲಿಗಾರ್**
ಪತ್ರ ಬರಹಗಾರರು, ಸಬ್ ರಿಜಿಸ್ಟ್ರಾರ್ ಕಚೇರಿ ಆವರಣ, ಪಿ. ಬಿ. ರಸ್ತೆ, ದಾವಣಗೆರೆ. ಮೊ. : 98440 65710



**ಗೌರಿ - ಗಣೇಶ ಹಬ್ಬದ ಶುಭಾಶಯಗಳು**

ನಮ್ಮೆಲ್ಲಾ ಆತ್ಮೀಯ ಸ್ನೇಹಿತರಿಗೂ, ಬಂಧುಗಳಿಗೂ ಹಾಗೂ ನಗರದ ಸರ್ವ ನಾಗರಿಕರಿಗೂ ಗೌರಿ-ಗಣೇಶ ಹಬ್ಬದ ಹಾರ್ದಿಕ ಶುಭಾಶಯಗಳು.

**ಪವಾಡಪ್ಪ ತಿಪ್ಪೇಸ್ವಾಮಿ** ದಸ್ತಾವೇಜು ಬರಹಗಾರರು, ಸಬ್ ರಿಜಿಸ್ಟ್ರಾರ್ ಕಛೇರಿ ಆವರಣ, ಪಿ.ಬಿ. ರಸ್ತೆ, ದಾವಣಗೆರೆ. ಮೊ.: 98443 31765



**ವಿಶ್ವಕರ್ಮ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,**

ಮುಖ್ಯ ಕಛೇರಿ : ನಂ.75/1, ತುಳಸಿ ಕಾಂಪ್ಲೆಕ್ಸ್, 1ನೇ ಮಹಡಿ, ವಸಂತ ರಸ್ತೆ, ದಾವಣಗೆರೆ-01. ಫೋ : 08192-271472
ಶಾಖಾ ಕಛೇರಿ : ಹೆಚ್.ಕೆ.ಆರ್. ಸರ್ಕಲ್, ನಿಟುವಳ್ಳಿ ದಾವಣಗೆರೆ. ಫೋ : 08192-264536

**ಶ್ರೀ ಗೌರಿ-ಗಣೇಶ ಹಬ್ಬದ ಹಾರ್ದಿಕ ಶುಭಾಶಯಗಳು**

ನಮ್ಮ ಸೊಸೈಟಿಯ ಎಲ್ಲಾ ಸದಸ್ಯ ಸಹಕಾರಿ ಬಾಂಧವರಿಗೆ, ಗ್ರಾಹಕರಿಗೆ ಹಾಗೂ ಸಮಸ್ತ ಕನ್ನಡ ಜನತೆಗೆ ಶ್ರೀ ಗೌರಿ-ಗಣೇಶ ಹಬ್ಬದ ಹಾರ್ದಿಕ ಶುಭಾಶಯಗಳು.

ಬಿ.ವಿ. ಶಿವಾನಂದ, ಅಧ್ಯಕ್ಷರು — ಆರ್. ವಿಜಯಕುಮಾರ್, ಉಪಾಧ್ಯಕ್ಷರು

ನಿರ್ದೇಶಕರುಗಳು :

- ಬಿ.ನಾಗೇಂದ್ರಾಚಾರ್ (ಬಸಾಪುರ)
- ಹೆಚ್.ಎನ್.ಜಯಾಚಾರ್ (ಹಿರೇಮೇಗಳಗೆರೆ)
- ಎಂ.ಪಿ.ನಾಗರಾಜ್ (ಶಾಮನೂರು)
- ಎನ್.ಪೂರ್ವಾಚಾರ್
- ಆರ್.ರೇಖಾ ರಮೇಶ್
- ಭಾಗ್ಯಮ್ಮ ಮಂಜುನಾಥ
- ಎ.ಬಿ. ರವಿ
- ಬಿ. ಸಿದ್ದಾಚಾರ್
- ಎಸ್.ನಾಗರಾಜಾಚಾರ್ (ಮಾಯಕೊಂಡ)
- ವಿ.ಎಂ.ಕೊಟ್ರೇಶಾಚಾರ್
- ನೀಲಾವತಿ ಮಂಜುನಾಥಾಚಾರ್
- ಸಿ.ಆರ್.ಬಡಿಗೇರ್, ಕಾರ್ಯದರ್ಶಿ



## ಗಣಪತಿ ಹಬ್ಬ : ಹಣ ವಸೂಲಿ ನೆಪದಲ್ಲಿ ಹಲ್ಲೆ - ಬಂಧನ

ದಾವಣಗೆರೆ, ಆ.30- ಗಣೇಶ ಹಬ್ಬದ ಪ್ರಯುಕ್ತ ಹಣ ವಸೂಲಿ ನೆಪದಲ್ಲಿ ಹಲ್ಲೆ ನಡೆಸಿದ ಓರ್ವ ಆರೋಪಿತನನ್ನು ಇಲ್ಲಿನ ಗಾಂಧಿನಗರ ಪೊಲೀಸರು ಬಂಧಿಸಿದ್ದಾರೆ.

ನಿನ್ನೆ ರಾತ್ರಿ 8 ಗಂಟೆ ಸಮಯದಲ್ಲಿ ನಗರದ ಬೂದಾಳ್ ರಸ್ತೆಯಲ್ಲಿ ಗಣೇಶ ಹಬ್ಬದ ಪ್ರಯುಕ್ತ ಹಣ ವಸೂಲಿ ನೆಪದಲ್ಲಿ ರಸ್ತೆಯಲ್ಲಿ ಹೋಗುತ್ತಿದ್ದವರ ಮೇಲೆ ಗಲಾಟೆ ಮಾಡಿ ಹಲ್ಲೆ ನಡೆಸಿದ ಬಗ್ಗೆ ಗಾಂಧಿನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಯಾರೇ 'ಗಣೇಶ ಹಬ್ಬದ' ಪ್ರಯುಕ್ತ ಹಣ ವಸೂಲಿ ಮಾಡಿದ್ದಲ್ಲಿ ಅವರ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗುವುದು. ಸಾರ್ವಜನಿಕರಿಗೆ ಈ ಬಗ್ಗೆ ಮಾಹಿತಿ ಇದ್ದರೆ ತುರ್ತು ಸಹಾಯವಾಣಿ 112ಕ್ಕೆ ಕರೆ ಮಾಡಿ ಪೊಲೀಸರಿಗೆ ತಿಳಿಸುವಂತೆ ಸೂಚಿಸಲಾಗಿದೆ.










# ಪ್ರಥಮ ವರ್ಷದ ಪುಣ್ಯಸ್ಮರಣೆ



ವಿನಯಶೀಲ ಸದ್ಗೃಹಿಣಿ

## ಲಿಂ|| ಶ್ರೀಮತಿ ಸುಶೀಲಮ್ಮ ಬಸವರಾಜಪ್ಪ

(ಲಿಂ|| ಶ್ರೀ ಶಾಮನೂರು ಬಸವರಾಜಪ್ಪನವರು
ಕಾಯಕ ಯೋಗಿಗಳು, ಪ್ರಗತಿಪರ ಕೃಷಿಕರು, ಪ್ರಸಿದ್ಧ ವರ್ತಕರು,
ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಇವರ ಧರ್ಮಪತ್ನಿ)

**ಇವರು ಶಿವೈಕ್ಯರಾಗಿ ಇಂದಿಗೆ ಒಂದು ವರ್ಷವಾಯಿತು.**
**ಸದಾ ಅವರ ಆದರ್ಶ, ಮಾರ್ಗದರ್ಶನಗಳ ಸ್ಮರಣೆಯಲ್ಲಿರುವ...**

### ಡಾ. ಶಾಮನೂರು ಶಿವಶಂಕರಪ್ಪ

ಶಾಸಕರು ಮತ್ತು ಮಾಜಿ ಸಚಿವರು, ಗೌರವ ಕಾರ್ಯದರ್ಶಿಗಳು, ಬಾಪೂಜಿ ವಿದ್ಯಾಸಂಸ್ಥೆ.

ಡಾ|| ಎಸ್.ಬಿ.ಮುರುಗೇಶ್, ಜ್ಯೋತಿ ಮುರುಗೇಶ್, ಆಕರ್ಷ್, ಅಲಂಕೃತಾ ಶಾಮನೂರು.
ಶ್ರೀಮತಿ ರತ್ನಾ, ಜಿ.ಎಸ್.ಪರಮೇಶ್ವರಗೌಡ್ರು, ಸಂದೀಪ್, ಶ್ವೇತಾ, ಸ್ವರೂಪ್, ಪ್ರಿಯಾ
ಶ್ರೀಮತಿ ಉಮಾ, ಡಾ|| ಧನ್ಯಪ್ರಕಾಶ್, ಡಾ|| ಸವೇಶ್, ಚಿ|| ಶ್ರಿಕಾ
ಶ್ರೀಮತಿ ವೀಣಾ, ಕಿಶೋರ್‌ಗೌಡ, ಚಿ|| ಸೇಜಲ್
ಶ್ರೀಮತಿ ಅನುಪಮಾ, ಚಂದ್ರಶೇಖರ್, ಚಿ|| ಸಮೃದ್ಧ್, ಸಮ್ಮಿತ
ಶ್ರೀಮತಿ ಡಾ|| ಮಂಜುಳ, ಡಾ|| ಶಿವಶಂಕರ್, ಸಂಜನ, ಸೆಜುತಿ,
ಶ್ರೀಮತಿ ಸುಧಾ, ರಾಜೇಂದ್ರ ಪಾಟೀಲ್, ಚಿ|| ಸುಪ್ರಿಯಾ
ಶ್ರೀ ಎಸ್.ಎಸ್.ಬಕ್ಕೇಶ್, ಪ್ರೀತಿ ಬಕ್ಕೇಶ್, ಚಿ|| ಅಶಿಕ್, ಸಮಧ್ಯ, ಅಕ್ಷತಾ, ಅದಿತ್
ಶ್ರೀ ಎಸ್.ಎಸ್. ಗಣೇಶ್, ರೇಖಾ ಗಣೇಶ್, ಅಭಿಜಿತ್, ಸ್ವಾತಿ, ಆಂಚಲ್ ಪ್ರಶಾಂತ್ ಜೆ.ಶೆಟ್ಟರ್, ಚಿ|| ಅಖಿಲಾ
ಶ್ರೀಮತಿ ಡಾ|| ಶೈಲಾ, ಡಾ|| ಅರ್ಪಣ್ ಭಟ್ಟಾಚಾರ್ಯ, ಚಿ|| ಶ್ರೇಯಶಿ, ಅಮರ್ತ್ಯ
ಶ್ರೀಮತಿ ಮೀನಾ, ಡಾ|| ಶರಣ್ ಪಾಟೀಲ್, ಚಿ| ಸೃಷ್ಟಿ, ಸಂಸ್ಕೃತಿ
ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್, ಪ್ರಭಾ ಮಲ್ಲಿಕಾರ್ಜುನ್ ಚಿ|| ಸಮರ್ಥ್, ಶ್ರೇಷ್ಠಾ, ಶಿವ

ಹಾಗೂ ಶಾಮನೂರು ಮನೆತನದ ಸಮಸ್ತ ಸದಸ್ಯರು, ಬಂಧುಗಳು-ಮಿತ್ರರು ಹಾಗೂ
ಶಾಮನೂರು ಸಮೂಹದ ಕೈಗಾರಿಕೆಗಳು, ವಾಣಿಜ್ಯ ಸಂಸ್ಥೆಗಳ ಸಮಸ್ತ ಸಿಬ್ಬಂದಿಗಳು ಹಾಗೂ ಹಿತೈಷಿಗಳು.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte